# ಕನ್ನಡ ಪೋಸ್ಟ್

ಸಂಪಾದಕ : ಮಂಜು ಬನವಾಸೆ

KANNADA POST

ಇದು ಸುದ್ದಿ ವಿಳಾಸ

ಕನ್ನಡ ದಿನಪತ್ರಿಕೆ

ಹಾಸನ | E-mail : kannadapostnews@gmail.com | / ಕನ್ನಡ post | Price: ₹1

Vol.No.02 | Issue. 230 | Pages. 2 | Date: 22-08-2026, SATURDAY | RNI NO: KARKAN/2024/89601 | Kannada Daily

ಸಂಪುಟ : 02 - ಸಂಚಿಕೆ : 230 - ಪುಟಗಳು : 2 | 22-08-2026 ಶನಿವಾರ | Ph: 8762954248 | ದರ : ₹1


## ಸಂಸತ್‌ನಲ್ಲಿ ಚರ್ಚೆಗೆ ಸಿಗದ ಅವಕಾಶ: ಸಂಸದರ ಬೇಸರ

**ಕನ್ನಡ ಪೋಸ್ಟ್ ನ್ಯೂಸ್ ನೆಟ್ವರ್ಕ್**

ಅರಸೀಕೆರೆ: ಇತ್ತೀಚೆಗೆ ನಡೆದ 20 ದಿನಗಳ ಸಂಸತ್ ಅಧಿವೇಶನದಲ್ಲಿ ಕೇಂದ್ರ ಸರ್ಕಾರ ಒಂದೇ ಒಂದು ದಿನ ಆರೋಗ್ಯಕರ ಚರ್ಚೆಗೆ ಸಹಮತ ಕೊಡಲಿಲ್ಲ ಎಂದು ಸಂಸದ ಶ್ರೇಯಸ್ ಪಟೇಲ್ ಬೇಸರ ವ್ಯಕ್ತಪಡಿಸಿದರು.

ಸುದ್ದಿಗಾರರೊಂದಿಗೆ ಶುಕ್ರವಾರ ಮಾತನಾಡಿದ ಅವರು, ನೀಟ್ ಪ್ರಶ್ನೆ ಪತ್ರಿಕೆ ಸೋರಿಕೆ ಮಾಡಿ ಬಡ ಹಾಗೂ ಪ್ರತಿಭಾವಂತ ವಿದ್ಯಾರ್ಥಿಗಳ ಜೊತೆ ಕೇಂದ್ರ ಚೆಲ್ಲಾಟ ಆಡಿತು ಎಂದು ಆಕ್ರೋಶ ವ್ಯಕ್ತಪಡಿಸಿದರು.

ಇದರ ವಿರುದ್ಧ ಪ್ರತಿಭಟನೆಗಿಳಿದ ವಿದ್ಯಾರ್ಥಿಗಳ ಮೇಲೆ ಪೊಲೀಸರಿಂದ ಹಲ್ಲೆ ಮಾಡಿಸಿ ಅಮಾನವೀಯವಾಗಿ ನಡೆದುಕೊಂಡಿತು ಎಂದು ದೂರಿದರು.

ಇದರ ಬಗ್ಗೆ ಸದನದಲ್ಲಿ ಮಾಹಿತಿ ಕೊಡಿ ಹಾಗೂ ಚರ್ಚೆಗೆ ಅವಕಾಶ ಕೊಡಿ ಎಂದು ನಾವು ನಮ್ಮ ನಾಯಕರು ಕೇಳಿದೆವು. ಆದರೆ ಅವರು ಸ್ಪಂದಿಸಲಿಲ್ಲ. ಚರ್ಚೆಗೂ ಒಪ್ಪಲಿಲ್ಲ. ಗೃಹ ಸಚಿವರು ಸದನದಲ್ಲಿ ಉತ್ತರ ಕೊಡಬೇಕು ಎಂಬ ನಮ್ಮ ಆಗ್ರಹಕ್ಕೂ ಅವರು ಮಣಿಯಲಿಲ್ಲ ಎಂದರು.

ಜೊತೆಗೆ ಸಂಸದರ ಸಮಸ್ಯೆ ಹೇಳಿಕೊಳ್ಳುವುದಕ್ಕೂ ಅವಕಾಶ ಕೊಡಲಿಲ್ಲ.



ನಮ್ಮಗಳ ಕಷ್ಟ ಸುಖವನ್ನೂ ಅವರು ಕೇಳಲಿಲ್ಲ. ಕೇಂದ್ರ ಶಿಕ್ಷಣ ಸಚಿವರ ರಾಜೀನಾಮೆ ನಂತರ ಕೇಸ್ ವಾಪಸ್ ಪಡೆಯುವುದಾಗಿ ಹೇಳಿದ್ದರು. ಆದರೆ ಈವರೆಗೂ ಆ ಕೆಲಸ ಆಗಿಲ್ಲ. ಇದು ಒಂದು ರೀತಿಯ ದಪ್ಪ ಚರ್ಮದ ಸರ್ಕಾರ. ಕೇಂದ್ರದ ಹಠಮಾರಿ ಧೋರಣೆಯಿಂದ ನಮ್ಮ ಕ್ಷೇತ್ರದ ಜನರು, ಸಮಸ್ಯೆಗಳ ಬಗ್ಗೆ ದನಿ ಎತ್ತಲಾಗಲಿಲ್ಲ ಎಂದು ಬೇಸರ ಹೊರ ಹಾಕಿದರು.

ಇದೇ ವೇಳೆ ವಂದೇ ಭಾರತ್ ರೈಲನ್ನು ಅರಸೀಕೆರೆ ಇಲ್ಲವೇ ಬೀರೂರಿನಲ್ಲಿ ನಿಲುಗಡೆ ಮಾಡಬೇಕು ಎಂಬ ತಮ್ಮ ಮನವಿಗೆ ಕೇಂದ್ರ ರೈಲ್ವೆ ಸಚಿವರು ಸಕಾರಾತ್ಮಕವಾಗಿ ಸ್ಪಂದಿಸಿದ್ದಾರೆ ಎಂದು ಪ್ರಶ್ನೆಗೆ ಉತ್ತರಿಸಿದರು.

> ನೆನೆಗುದಿಗೆ ಬಿದ್ದಿರುವ ಹುಳಿಯಾರು-ಬಾಣಾವರ ರಸ್ತೆ ಅಗಲೀಕರಣಕ್ಕೆ 102 ಕೋಟಿ ರೂ. ಮೊತ್ತದ ಯೋಜನೆಗೆ ಅನುಮೋದನೆ ಸಿಗುವ ಹಂತದಲ್ಲಿದೆ. ಯೋಜನೆಗೆ ಕೇಂದ್ರ ಭೂ ಸಾರಿಗೆ ಸಚಿವರು ಸಕಾರಾತ್ಮಕವಾಗಿ ಸ್ಪಂದಿಸಿದ್ದಾರೆ.
>
> **- ಶ್ರೇಯಸ್ ಪಟೇಲ್, ಸಂಸದ**

ಭದ್ರಾ ಮೇಲ್ದಂಡೆ ವಿಚಾರದಲ್ಲಿ ಈಗಿನ ಹಣಕಾಸು ಸಚಿವರಾಗಿರುವ ನಿರ್ಮಲಾ ಸೀತಾರಾಮನ್ ಅವರೇ 5300 ಕೋಟಿ ನೀಡುವ ಘೋಷಣೆ ಮಾಡಿದ್ದರು. ಆದರೆ ಕೊಟ್ಟ ಮಾತಿನಂತೆ ನಡೆದುಕೊಂಡಿಲ್ಲ. ಕಾಂಗ್ರೆಸ್‌ನ 9 ಸಂಸದರು, ಸಿಎಂ ಡಿ.ಕೆ. ಶಿವಕುಮಾರ್ ಮನವಿ ಮಾಡಿದರೂ ಹಣ ಬಿಡುಗಡೆ ಮಾಡದೇ ಇರುವುದು ರೈತರ ಮೇಲೆ ಕೇಂದ್ರಕ್ಕೆ ಇರುವ ಧೋರಣೆ ತೋರಿಸುತ್ತದೆ ಎಂದರು.

ಕೇಂದ್ರದಲ್ಲಿ ಸಕಾರಣ ಇದ್ದರೂ ಚರ್ಚೆಗೆ ಅವಕಾಶ ಕೊಡಲಿಲ್ಲ, ಹಠಮಾರಿತನದಿಂದ ಅಧಿವೇಶನ ನಡೆಸಿದರು. ಆದರೆ ಇಲ್ಲಿ ಪುರಾವೆ ಇಲ್ಲದ ಸಣ್ಣ ವಿಷಯ ಇಟ್ಟುಕೊಂಡು ಬಿಜೆಪಿ ಮತ್ತು ಜೆಡಿಎಸ್ ಸದನ ನಡೆಸಲು ಬಿಡುತ್ತಿಲ್ಲ ಎಂದು ದೂಷಿಸಿದರು.

ಬರಗಾಲ ತೀವ್ರಗೊಂಡಿರುವ ಹಿನ್ನೆಲೆಯಲ್ಲಿ ಜಿಲ್ಲೆಯಲ್ಲಿ ಶೇ.70 ರಷ್ಟು ರೈತರು ಬಿತ್ತನೆ ಮಾಡಿಲ್ಲ. ಕುಡಿಯುವ ನೀರಿನ ಸಮಸ್ಯೆ, ಬೆಳೆಗಳಿಗೆ ರೋಗದ ಸಮಸ್ಯೆ ಇದೆ. ಇದರ ನಡುವೆ ಕಾವೇರಿ ವಿವಾದ ಶುರುವಾಗಿದೆ. ಇಂತಹ ಸಂದರ್ಭದಲ್ಲಿ ವಿಪಕ್ಷಗಳು ಸರ್ಕಾರಕ್ಕೆ ಸಹಕಾರ ಕೊಡಬೇಕು.

ಅದನ್ನು ಬಿಟ್ಟು ಅಧಿವೇಶನ ನಡೆಸಲು ಬಿಜೆಪಿ-ಜೆಡಿಎಸ್ ಬಿಡದೇ ಇರುವುದು ಖಂಡನೀಯ. ಈ ಮೂಲಕ ಎರಡೂ ಪಕ್ಷಗಳು ಜನರ ಭಾವನೆಗೆ ಧಕ್ಕೆ ತರುವ ಕೆಲಸ ಮಾಡುತ್ತಿವೆ.

ಇದು ರಾಜ್ಯದ ಜನರ ಮೇಲೆ ಉಭಯ ಪಕ್ಷಗಳು ಇಟ್ಟಿರುವ ಅಸಡ್ಡೆ ತೋರಿಸುತ್ತದೆ ಎಂದು ಬೊಟ್ಟು ಮಾಡಿದರು.

ನಗರಸಭೆ ನಿಕಟ ಪೂರ್ವ ಅಧ್ಯಕ್ಷ ಎಂ.ಸಮೀವುಲ್ಲಾ, ಜಿಲ್ಲಾ ಕಾಂಗ್ರೆಸ್ ಕಾರ್ಯಾಧ್ಯಕ್ಷ ಶಶಿಧರ್, ಜಿಲ್ಲಾ ವಕ್ಫ್ ಬೋರ್ಡ್ ಅಧ್ಯಕ್ಷ ಸಿಕಂದರ್, ನಗರಸಭೆ ಮಾಜಿ ಸದಸ್ಯ ದರ್ಶನ್ ಮೊದಲಾದವರಿದ್ದರು.

### ಪಕ್ಷ ಸಂಘಟನೆಗೆ ಸಹಕಾರ

ಸ್ಥಳೀಯ ಶಾಸಕ ಶಿವಲಿಂಗೇಗೌಡರಿಗೆ ಮಂತ್ರಿಸ್ಥಾನ ನೀಡಿರುವುದು ನನಗಂತೂ ತುಂಬಾ ಖುಷಿ ಇದೆ. ಜಿಲ್ಲೆಯಲ್ಲಿ ಪಕ್ಷ ಸಂಘಟಿಸಲು ಸಚಿವರು ಬೇಕಿತ್ತು. ಈ ವಿಚಾರದಲ್ಲಿ ನಮ್ಮ ಬೇಡಿಕೆ ಈಡೇರಿದೆ. ಆದರೆ ಅಬಕಾರಿ ಖಾತೆ ಕೊಟ್ಟಿರುವುದು ಹೈಕಮಾಂಡ್ ತೀರ್ಮಾನ. ಅದಕ್ಕೆ ನಾವೆಲ್ಲರೂ ಬದ್ಧ ಎಂದು ಪ್ರಶ್ನೆಯೊಂದಕ್ಕೆ ಶ್ರೇಯಸ್ ಪಟೇಲ್ ಹೇಳಿದರು.

## ಮೇಕೆ ಕೊಂದು ಹಾಕಿದ ಚಿರತೆ: ಆತಂಕ



**ಕನ್ನಡ ಪೋಸ್ಟ್ ನ್ಯೂಸ್ ನೆಟ್ವರ್ಕ್**

ಹೊಳೆನರಸೀಪುರ: ಮನೆ ಮುಂದೆ ಕಟ್ಟಿದ್ದ ಮೇಕೆಯನ್ನು ಚಿರತೆ ಕೊಂದು ಹೊತ್ತೊಯ್ಯಲು ಯತ್ನಿಸಿದ ಘಟನೆ ತಾಲ್ಲೂಕಿನ ದಾಳಗೌಡನಹಳ್ಳಿಯಲ್ಲಿ ಗುರುವಾರ ರಾತ್ರಿ ನಡೆದಿದೆ.

ಗ್ರಾಮದ ಡಿ.ಆರ್. ಮಲ್ಲೇಶ್ ಅವರ ಮನೆ ಮುಂದೆ ಈ ಘಟನೆ ನಡೆದಿದೆ. ರಾತ್ರಿ ಸುಮಾರು 9 ಗಂಟೆ ಸಮಯದಲ್ಲಿ ಮನೆ ಮುಂದೆ ಕಟ್ಟಿದ್ದ ಮೇಕೆಯ ಮೇಲೆ ಚಿರತೆ ದಾಳಿ ನಡೆಸಿದೆ. ಶಬ್ದ ಕೇಳಿ ಮನೆಯಿಂದ ಹೊರ ಬಂದ ಮಹಿಳೆ ಚಿರತೆಯನ್ನು ಕಂಡು ಭಯದಿಂದ ಕೂಗಾಡಿದ್ದಾರೆ. ಅಷ್ಟೊತ್ತಿಗೆ ಮೇಕೆ ಮೇಲೆ ದಾಳಿ ಮಾಡಿ ಕೊಂದು ಹಾಕಿದ ಚಿರತೆ ಭಯಗೊಂಡು ಪರಾರಿಯಾಗಿದೆ.

ಗ್ರಾಮದ ಮಲ್ಲೇಶ್ ಹಾಗೂ ಅವರ ಸಹೋದರರು ಗ್ರಾಮದಿಂದ ಅನತಿ ದೂರದ ತಮ್ಮ ಜಮೀನಿನ ಬಳಿ ಮನೆ ನಿರ್ಮಿಸಿಕೊಂಡು ನೆಲೆಸಿದ್ದಾರೆ. ಮನೆಯ ಸುತ್ತಮುತ್ತ ನಿರ್ಜನ ಪ್ರದೇಶ ಆಗಿರುವುದರಿಂದ ಕಾಡು ಪ್ರಾಣಿಗಳ ಭಯ ಕುಟುಂಬಸ್ಥರಲ್ಲಿ ಮನೆ ಮಾಡಿದೆ. ಘಟನೆಯ ಬಗ್ಗೆ ತಾಲೂಕಿನ ಅರಣ್ಯ ಇಲಾಖೆಗೆ ಮಾಹಿತಿ ನೀಡಿದ್ದು ಸಿಬ್ಬಂದಿ ಪರಿಶೀಲನೆ ಮಾಡಿ ಚಿರತೆಯನ್ನು ಸೆರೆ ಹಿಡಿಯಲು ಬೋನಿನ ವ್ಯವಸ್ಥೆ ಮಾಡುವುದಾಗಿ ಭರವಸೆ ನೀಡಿದ್ದಾರೆ.

## ಮೋಸದ ವ್ಯಕ್ತಿಯನ್ನು ಪೊಲೀಸರಿಗೆ ಒಪ್ಪಿಸಿದ ರೈತರು



**ಕನ್ನಡ ಪೋಸ್ಟ್ ನ್ಯೂಸ್ ನೆಟ್ವರ್ಕ್**

ಹಾಸನ: ಸುಲಭದಲ್ಲಿ ಕೃಷಿ ಸಾಲ, ರಸಗೊಬ್ಬರ ಅಂಗಡಿಗೆ ಡೀಲರ್‌ಶಿಪ್ ಕೊಡಿಸುವುದಾಗಿ ಹಳೇಬೀಡು ಹೋಬಳಿಯ 150ಕ್ಕೂ ಅಧಿಕ ರೈತರು ಹಾಗೂ ಆರ್ಥಿಕ ಸದೃಢರಿಗೆ ಕೋಟ್ಯಂತರ ರೂ. ಮೋಸ ಮಾಡಿರುವ ಕೋಲಾರ ಮೂಲದ ವ್ಯಕ್ತಿಯನ್ನು ರೈತರೇ ಪೊಲೀಸರಿಗೆ ಒಪ್ಪಿಸಿರುವ ಘಟನೆ ನಡೆದಿದೆ.

ಕೋಲಾರ ಜಿಲ್ಲೆ ಬೈರಕೂರು ಹೋಬಳಿ ಕಾಡೇನಹಳ್ಳಿಯ ಜಿ.ಶಂಕರಪ್ಪ ಆರೋಪಿ. ಹಳೇಬೀಡು ಹೋಬಳಿಯ ರೈತರು ಹಾಗೂ ಉದ್ದಿಮೆ ಮಾಡಲು ಬಯಸಿದ ಆರ್ಥಿಕ ಸಬಲರೇ ಆತನ ಗುರಿಯಾಗಿದ್ದರು. ಶಂಕರಪ್ಪ ತನ್ನನ್ನು ಪಿಎಂಇಜಿಪಿ (ಪ್ರಧಾನಮಂತ್ರಿ ಯೋಜಗಾರ ಯೋಜನೆ) ಏಜೆಂಟ್ ಎಂದು ಪರಿಚಯ ಮಾಡಿಕೊಂಡಿದ್ದ. ಕೇಂದ್ರ ಸರ್ಕಾರದ ಅಧೀನದ ಎಫ್‌ಐಎ ಕಂಪನಿಯ ಉದ್ಯೋಗಿ ಎಂದು ನಂಬಿಸಿ ನಕಲಿ ಗುರುತಿನ ಚೀಟಿ ತೋರಿಸಿ ಎಲ್ಲರಿಗೂ ಮಕ್ಮಲ್ ಟೋಪಿ ಹಾಕಿದ್ದ ಎಂದು ತಿಳಿದುಬಂದಿದೆ.

ರಾಷ್ಟ್ರೀಕೃತ ಬ್ಯಾಂಕ್‌ಗಳಿಂದ 40 ರಿಂದ 50 ಲ.ರೂ. ವರೆಗೆ ಹೈನುಗಾರಿಕೆ ಸಾಲ, ರಸಗೊಬ್ಬರ ಮಾರಾಟ ಮಳಿಗೆ ಪ್ರಾರಂಭಿಸಲು ಸಹಾಯಧನದ ಜೊತೆಗೆ ಪರವಾನಗಿ, ರಿಯಾಯಿತಿ ದರದಲ್ಲಿ ಕ್ರಿಮಿನಾಶಕ ಔಷಧಿ ಡೀಲರ್ ಶಿಪ್ ಕೊಡಿಸುವುದಾಗಿ ಬಣ್ಣದ ಮಾತುಗಳಿಂದ ತನ್ನ ಮೋಸದ ಬಲೆಗೆ ಬೀಳಿಸಿಕೊಂಡಿದ್ದ. ಆತನ ದುರುದ್ದೇಶವನ್ನು ಅರಿಯುವಲ್ಲಿ ವಿಫಲರಾದ ರೈತರು ಲಕ್ಷಾಂತರ ರೂಪಾಯಿ ನೀಡಿದ್ದಾರೆ. ಆದರೆ ಎರಡು ವರ್ಷ ಕಳೆದರೂ ಹಾಕಿದ ಬಂಡವಾಳಕ್ಕೆ ಪ್ರತಿಫಲ ದೊರೆಯದೆ ಇದ್ದಾಗ ತಾವು ಗಂಡಾಂತರಕ್ಕೆ ಸಿಲುಕಿದ್ದೇವೆಂದು ದಿಗ್ಭ್ರಾಂತರಾಗಿದ್ದರು.

ವ್ಯಕ್ತಿಯಿಂದ ಮೋಸ ಹೋಗಿದ್ದೇವೆಂದು ತಿಳಿಯುತ್ತಿದ್ದಂತೆ ರೈತರೆಲ್ಲಾ ಹಳೇಬೀಡು ಠಾಣೆಯಲ್ಲಿ ದೂರು ದಾಖಲಿಸಿದ್ದರು. ಆದರೆ ಪೊಲೀಸರು ಸಮಸ್ಯೆಯನ್ನು ಗಂಭೀರವಾಗಿ ಪರಿಗಣಿಸದ ಹಿನ್ನೆಲೆಯಲ್ಲಿ ಮೋಸಕ್ಕೆ ಒಳಗಾದವರು ಕೋಲಾರ ಜಿಲ್ಲೆ ಮುಳಬಾಗಿಲು ತಾಲ್ಲೂಕಿನ ನಂದಲಿ ಪಿಎಸ್‌ಐ ವಿದ್ಯಾಶ್ರೀ ಅವರ ಬಳಿ ವಿಚಾರ ತಿಳಿಸಿದಾಗ ಶಂಕರಪ್ಪ ಮಹಾನ್ ಕಲಾವಿದ ಎಂಬುದು ಗೊತ್ತಾಗಿದೆ. ಅಲ್ಲಿನ ಪೊಲೀಸರು ಆತನ ಜಾಡು ಹಿಡಿದು ಬೆನ್ನತ್ತಿದ್ದಾಗ ಹಳೇಬೀಡು ಮಾತ್ರವಲ್ಲದೆ ಬೇರೆ ಕಡೆಯೂ ಇದೇ ರೀತಿ ಕಳ್ಳಾಟ ನಡೆಸಿದ್ದಾನೆಂದು ತಿಳಿದಿದೆ.

ಹೇಗೋ ಆತ ಇರುವ ಜಾಗ ಪತ್ತೆಮಾಡಿ ದಿಢೀರ್‌ನೆ ಆತನ ಎದುರು ರೈತರು ಪ್ರತ್ಯಕ್ಷರಾದಾಗ ಅಂಗವಿಕಲನ ಸೋಗಿನಲ್ಲಿ ಇದ್ದನಂತೆ. ಆತನೊಂದಿಗೆ ಹೆಚ್ಚು ಮಾತನಾಡದೆ ರೈತರು ನೇರವಾಗಿ ಹಳೇಬೀಡಿಗೆ ಕರೆದುಕೊಂಡು ಬಂದು ಪೊಲೀಸರಿಗೆ ಒಪ್ಪಿಸಿದ್ದಾರೆ.

## ಉರ್ದು ಶಿಕ್ಷಕರ ಹುದ್ದೆ ಭರ್ತಿಗೆ ಆಗ್ರಹ

### ಅಧಿಸೂಚನೆಯಲ್ಲಿ ಉರ್ದು ಮಾಧ್ಯಮ ಸೇರಿಸಿ | ಜಿಲ್ಲಾಡಳಿತಕ್ಕೆ ಮನವಿ

**ಕನ್ನಡ ಪೋಸ್ಟ್ ನ್ಯೂಸ್ ನೆಟ್ವರ್ಕ್**

ಹಾಸನ: ರಾಜ್ಯ ಸರ್ಕಾರ ಇತ್ತೀಚೆಗೆ ಪ್ರಕಟಿಸಿರುವ 15 ಸಾವಿರ ಶಿಕ್ಷಕರ ನೇಮಕಾತಿ ಪ್ರಕ್ರಿಯೆಯಲ್ಲಿ ಉರ್ದು ಮಾಧ್ಯಮ ಶಾಲೆಗಳ ಶಿಕ್ಷಕರ ಖಾಲಿ ಹುದ್ದೆಗಳನ್ನು ಸೇರಿಸಿಲ್ಲ ಎಂದು ಆರೋಪಿಸಿ ಮುಸ್ಲಿಂ ಸಂಘಟನೆಗಳು ಹಾಗೂ ಉರ್ದು ಅಭಿಮಾನಿಗಳ ಬಳಗದಿಂದ ಶುಕ್ರವಾರ ಜಿಲ್ಲಾಧಿಕಾರಿ ಕಚೇರಿ ಎದುರು ಪ್ರತಿಭಟನೆ ನಡೆಸಲಾಯಿತು.

ಮುಖಂಡರಾದ ಅತೀಖು ಉರ್ ರೆಹಮಾನ್ ಮತ್ತು ಅಕ್ಮಲ್ ಪಾಷಾ ಮಾತನಾಡಿ, ಉರ್ದು ಮಾಧ್ಯಮ ಶಾಲೆಗಳಲ್ಲಿ ಶಿಕ್ಷಕರ ಕೊರತೆಯಿಂದ ವಿದ್ಯಾರ್ಥಿಗಳ ಶಿಕ್ಷಣದ ಮೇಲೆ ಪ್ರತಿಕೂಲ ಪರಿಣಾಮ ಬೀರುತ್ತಿದೆ. ಸರ್ಕಾರದ ನೇಮಕಾತಿ ಪ್ರಕ್ರಿಯೆಯಲ್ಲಿ ಖಾಲಿ ಹುದ್ದೆಗಳನ್ನು ಸೇರಿಸದಿರುವುದು ಅರ್ಹ ಉರ್ದು ಶಿಕ್ಷಕ ಅಭ್ಯರ್ಥಿಗಳಿಗೂ ಅನ್ಯಾಯವಾಗಲಿದೆ ಎಂದರು. ಜಿಲ್ಲೆಯಲ್ಲಿ 95 ಸರ್ಕಾರಿ ಉರ್ದು ಮಾಧ್ಯಮ ಶಾಲೆಗಳು, ಎರಡು ಅನುದಾನಿತ ಹಾಗೂ 24 ಖಾಸಗಿ ಶಾಲೆಗಳಿದ್ದು, 13 ಪ್ರೌಢಶಾಲೆಗಳಲ್ಲಿ ಉರ್ದು ಪ್ರಥಮ ಭಾಷೆಯಾಗಿ ಬೋಧಿಸಲಾಗುತ್ತಿದೆ. ಅಲ್ಲದೆ, 11 ಪಿಯು ಕಾಲೇಜುಗಳು ಹಾಗೂ ಮೂರು ಪದವಿ ಕಾಲೇಜುಗಳಲ್ಲಿ ಉರ್ದು ಮಾಧ್ಯಮದ ಶಿಕ್ಷಣ ವ್ಯವಸ್ಥೆಯಿದೆ. ಸುಮಾರು 1,500 ವಿದ್ಯಾರ್ಥಿಗಳು ಉರ್ದು ಮಾಧ್ಯಮದಲ್ಲಿ ವ್ಯಾಸಂಗ ಮಾಡುತ್ತಿದ್ದು, ಸುಮಾರು 200 ಉರ್ದು ಶಿಕ್ಷಕರು ಕಾರ್ಯನಿರ್ವಹಿಸುತ್ತಿದ್ದಾರೆ ಎಂದರು. ಇದರ ನಡುವೆಯೇ ಜಿಲ್ಲೆಯಲ್ಲಿ 13 ಪ್ರಾಥಮಿಕ ಶಾಲಾ ಶಿಕ್ಷಕರು, 26 ಪದವೀಧರ ಪ್ರಾಥಮಿಕ ಶಿಕ್ಷಕರು (ಉಖಿಖಿ) ಹಾಗೂ 10 ಪ್ರೌಢಶಾಲಾ ಶಿಕ್ಷಕರ ಹುದ್ದೆಗಳು ಸೇರಿದಂತೆ ಒಟ್ಟು 49 ಉರ್ದು ಶಿಕ್ಷಕರ ಹುದ್ದೆಗಳು ಖಾಲಿ ಇವೆ. ಖಾಲಿ ಹುದ್ದೆಗಳು ಭರ್ತಿಯಾಗದೆ ಇರುವುದರಿಂದ ಹಲವು ಸರ್ಕಾರಿ ಉರ್ದು ಮಾಧ್ಯಮ ಶಾಲೆಗಳಲ್ಲಿ ಈಗಾಗಲೇ ಶಿಕ್ಷಕರ ಕೊರತೆ ಎದುರಾಗಿದೆ. ಇದರಿಂದ ಪಾಠ-ಪ್ರವಚನ ಸಮರ್ಪಕವಾಗಿ ನಡೆಯದಿರುವುದು, ಕಾರ್ಯನಿರ್ವಹಿಸುತ್ತಿರುವ ಶಿಕ್ಷಕರ ಮೇಲೆ ಹೆಚ್ಚುವರಿ ಹೊರೆ ಬೀಳುವುದು ಹಾಗೂ ಶಿಕ್ಷಣದ ಗುಣಮಟ್ಟದ ಮೇಲೆ ಪರಿಣಾಮ ಬೀರುವ ಆತಂಕವಿದೆ ಎಂದು ಸಂಘಟನೆಗಳು ಅಭಿಪ್ರಾಯಪಟ್ಟವೆ. ಉರ್ದು ಮಾಧ್ಯಮದಲ್ಲಿ ಬೋಧನೆ ಮಾಡಲು ಅಗತ್ಯ ಅರ್ಹತೆ ಹೊಂದಿರುವ ಡಿ.ಎಡ್. ಮತ್ತು ಬಿ.ಎಡ್. ಪದವೀಧರರು ಸರ್ಕಾರಿ ಶಿಕ್ಷಕರ ನೇಮಕಾತಿಗಾಗಿ ಕಾಯುತ್ತಿದ್ದಾರೆ. ಆದರೆ ಅವರ ಅರ್ಹತೆಗೆ ಅನುಗುಣವಾದ ಹುದ್ದೆಗಳನ್ನು ನೇಮಕಾತಿ ಪ್ರಕ್ರಿಯೆಯಲ್ಲಿ ಸೇರಿಸದಿದ್ದರೆ ಉದ್ಯೋಗಾವಕಾಶದಿಂದ ವಂಚಿತರಾಗುವ ಪರಿಸ್ಥಿತಿ ನಿರ್ಮಾಣವಾಗಲಿದೆ ಎಂದು ಮುಖಂಡರು ಹೇಳಿದರು.



ಭಾಷೆ ಕೇವಲ ಸಂವಹನದ ಸಾಧನವಲ್ಲ. ಅದು ವಿದ್ಯಾರ್ಥಿಗಳ ಕಲಿಕೆ, ಸಂಸ್ಕೃತಿ ಮತ್ತು ಶೈಕ್ಷಣಿಕ ಬೆಳವಣಿಗೆಯ ಪ್ರಮುಖ ಭಾಗವಾಗಿದೆ. ಸಂವಿಧಾನದ 350ಎ ವಿಧಿಯ ಆಶಯದಂತೆ ಭಾಷಾ ಅಲ್ಪಸಂಖ್ಯಾತ ಮಕ್ಕಳಿಗೆ ಪ್ರಾಥಮಿಕ ಹಂತದಲ್ಲಿ ಮಾತೃಭಾಷೆಯಲ್ಲಿ ಶಿಕ್ಷಣ ಪಡೆಯಲು ಅಗತ್ಯ ಸೌಲಭ್ಯ ಕಲ್ಪಿಸುವುದು ಸರ್ಕಾರದ ಜವಾಬ್ದಾರಿಯಾಗಿದೆ. ಹೀಗಾಗಿ ಉರ್ದು ಮಾಧ್ಯಮ ಶಾಲೆಗಳಲ್ಲಿ ಅಗತ್ಯ ಸಂಖ್ಯೆಯ ಶಿಕ್ಷಕರನ್ನು ನೇಮಿಸಬೇಕು ಎಂದು ಒತ್ತಾಯಿಸಿದರು. ಪ್ರಸ್ತುತ ನಡೆಯುತ್ತಿರುವ ಶಿಕ್ಷಕರ ನೇಮಕಾತಿ ಪ್ರಕ್ರಿಯೆಗೆ ಉರ್ದು ಮಾಧ್ಯಮ ಶಾಲೆಗಳ ಎಲ್ಲಾ ಅರ್ಹ ಖಾಲಿ ಹುದ್ದೆಗಳನ್ನು ಸೇರಿಸಿ ತಕ್ಷಣ ಪೂರಕ ಅಧಿಸೂಚನೆ ಹೊರಡಿಸಬೇಕು. ಹಾಸನ ಜಿಲ್ಲೆಯ ಎಲ್ಲ ಸರ್ಕಾರಿ ಉರ್ದು ಮಾಧ್ಯಮ ಪ್ರಾಥಮಿಕ ಮತ್ತು ಪ್ರೌಢಶಾಲೆಗಳಲ್ಲಿನ ಖಾಲಿ ಹುದ್ದೆಗಳ ಕುರಿತು ಸಮಗ್ರ ಹಾಗೂ ಪಾರದರ್ಶಕ ಸಮೀಕ್ಷೆ ನಡೆಸಬೇಕು. ಡಿ.ಎಡ್., ಬಿ.ಎಡ್. ಸೇರಿದಂತೆ ಅಗತ್ಯ ಅರ್ಹತೆ ಹೊಂದಿರುವ ಉರ್ದು ಶಿಕ್ಷಕ ಆಕಾಂಕ್ಷಿಗಳಿಗೆ ನೇಮಕಾತಿಯಲ್ಲಿ ನ್ಯಾಯಯುತ ಅವಕಾಶ ನೀಡಬೇಕು. ಖಾಯಂ ಶಿಕ್ಷಕರ ನೇಮಕಾತಿ ಪೂರ್ಣಗೊಳ್ಳುವವರೆಗೆ ಅಗತ್ಯವಿರುವ ಶಾಲೆಗಳಲ್ಲಿ ಪರ್ಯಾಯ ವ್ಯವಸ್ಥೆ ಮೂಲಕ ಶಿಕ್ಷಕರ ಕೊರತೆಯನ್ನು ನೀಗಿಸಿ ವಿದ್ಯಾರ್ಥಿಗಳ ಶಿಕ್ಷಣಕ್ಕೆ ತೊಂದರೆಯಾಗದಂತೆ ಕ್ರಮ ಕೈಗೊಳ್ಳಬೇಕು ಎಂದು ಆಗ್ರಹಿಸಿದರು.

ಅಲ್ಲದೆ, ಈ ವಿಷಯವನ್ನು ಗಂಭೀರ ಶೈಕ್ಷಣಿಕ ಸಮಸ್ಯೆಯಾಗಿ ಪರಿಗಣಿಸಿ ಜಿಲ್ಲಾಧಿಕಾರಿ ಕಚೇರಿಯಿಂದ ರಾಜ್ಯ ಸರ್ಕಾರ ಹಾಗೂ ಶಾಲಾ ಶಿಕ್ಷಣ ಇಲಾಖೆಗೆ ತುರ್ತು ಶಿಫಾರಸು ಕಳುಹಿಸುವಂತೆ ಮನವಿ ಮಾಡಿದರು.

ಸಮುದಾಯದ ಸಯ್ಯದ್ ತಾಜ್, ಹೆಚ್. ಆರ್. ಮಾಜಿದ್, ಬಷೀರ್ ಅಹಮದ್, ಸಯ್ಯದ್ ಫರೀದ್, ಇಲ್ಯಾಸ್ ಬೇಗ್, ಮೊಹಮ್ಮದ್ ಇಸಾಖ್, ಮೊಹಮ್ಮದ್ ಆಲಿ, ಅಮ್ಜದ್ ಖಾನ್ ಶಬ್ಬೀರ್ ಅಹಮದ್, ಬಾಬು ಇತರರು ಉಪಸ್ಥಿತರಿದ್ದರು.

## ಲಾರಿಗೆ ಕಾರು ಡಿಕ್ಕಿ ಐವರಿಗೆ ಗಂಭೀರ ಗಾಯ

**ಕನ್ನಡ ಪೋಸ್ಟ್ ನ್ಯೂಸ್ ನೆಟ್ವರ್ಕ್**



ಸಕಲೇಶಪುರ: ರಾಷ್ಟ್ರೀಯ ಹೆದ್ದಾರಿ 75ರ ಹೆಗ್ಗದ್ದೆ ಸಮೀಪ ಶುಕ್ರವಾರ ರಸ್ತೆಬದಿ ನಿಂತಿದ್ದ ಲಾರಿಗೆ ಹಿಂದಿನಿಂದ ವೇಗವಾಗಿ ಬಂದ ಸ್ವಿಫ್ಟ್ ಕಾರು ಡಿಕ್ಕಿಯಾಗಿ ಐವರು ಗಂಭೀರ ಗಾಯಗೊಂಡಿದ್ದಾರೆ. ದೊಡ್ಡಬಳ್ಳಾಪುರ ಮೂಲದ ದೇವರಾಜ್ (42), ನಾಗರಾಜ್ (48), ನಾಗೇಶ್ (40), ಮಂಜುನಾಥ್ (35) ಹಾಗೂ ಬಚ್ಚೇಗೌಡ (45) ಗಾಯಗೊಂಡಿದ್ದಾರೆ.

ಕುಕ್ಕೆ ಸುಬ್ರಹ್ಮಣ್ಯ ಸ್ವಾಮಿ ದರ್ಶನ ಮುಗಿಸಿಕೊಂಡು ಚಿಕ್ಕಬಳ್ಳಾಪುರದತ್ತ ತೆರಳುತ್ತಿದ್ದ ವೇಳೆ ಅಪಘಾತ ಸಂಭವಿಸಿದೆ. ಅಪಘಾತದ ತೀವ್ರತೆಗೆ ಕಾರಿನ ಮುಂಭಾಗ ಸಂಪೂರ್ಣ ಜಖಂಗೊಂಡಿದೆ. ಅಪಘಾತದ ಮಾಹಿತಿ ತಿಳಿದು ಸ್ಥಳೀಯರು ಹಾಗೂ ಪೊಲೀಸರು ಗಾಯಾಳುಗಳನ್ನು ಸಕಲೇಶಪುರ ಸರ್ಕಾರಿ ಆಸ್ಪತ್ರೆಗೆ ಕರೆದೊಯ್ದರು. ಪ್ರಥಮ ಚಿಕಿತ್ಸೆ ಬಳಿಕ ಹೆಚ್ಚಿನ ಚಿಕಿತ್ಸೆಗಾಗಿ ಹಾಸನದ ಆಸ್ಪತ್ರೆಗೆ ರವಾನಿಸಲಾಯಿತು. ಪಟ್ಟಣ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

## ಬರಗೂರಿನಲ್ಲಿ ರಸ್ತೆ ಸುರಕ್ಷತೆ ಸಪ್ತಾಹ

**ಕನ್ನಡ ಪೋಸ್ಟ್ ನ್ಯೂಸ್ ನೆಟ್ವರ್ಕ್**

ಚನ್ನರಾಯಪಟ್ಟಣ: ತಾಲ್ಲೂಕಿನ ದಂಡಿಗನಹಳ್ಳಿ ಹೋಬಳಿ ಬರಗೂರು ಗ್ರಾಮದಲ್ಲಿ ಭಾರತೀಯ ರೆಡ್ ಕ್ರಾಸ್, ಪುನರ್ಜೀವ ಸ್ವಯಂ ಸೇವಾ ಸಂಘ ಹಾಗೂ ಸಂಚಾರ ಪೊಲೀಸ್ ಠಾಣೆಯಿಂದ ರಸ್ತೆ ಸುರಕ್ಷತೆ ಹಾಗೂ ಸಂಚಾರಿ ನಿಯಮಗಳ ಅರಿವು ಕಾರ್ಯಕ್ರಮ ಹಮ್ಮಿಕೊಳ್ಳಲಾಗಿತ್ತು.

ಸಂಚಾರ ಠಾಣೆ ಪಿಎಸ್‌ಐ ಚರಣ್ ಗೌಡ ಮಾತನಾಡಿ, ರಸ್ತೆ ನಿಯಮ ಪಾಲಿಸುವುದು ಪ್ರತಿಯೊಬ್ಬರ ಜವಾಬ್ದಾರಿ. ಅವಸರದ ಚಾಲನೆ ಅಪಾಯಕ್ಕೆ ಆಹ್ವಾನ ನೀಡುತ್ತದೆ. ದ್ವಿಚಕ್ರ ವಾಹನ ಸವಾರರು ಕಡ್ಡಾಯವಾಗಿ ಹೆಲ್ಮೆಟ್ ಹಾಗು ಕಾರು ಚಾಲಕರು ಸೀಟ್ ಬೆಲ್ಟ್ ಧರಿಸುವುದು ಕಡ್ಡಾಯ ಎಂದರು.





ರೆಡ್ ಕ್ರಾಸ್ ಸಂಸ್ಥೆಯ ತಾಲ್ಲೂಕು ಪ್ರತಿನಿಧಿ ಹೆಚ್.ಜಿ. ಭರತ್‌ಕುಮಾರ್ ಮಾತನಾಡಿ, ಯುವಕರು ಕಾನೂನು ಪಾಲನೆಗೆ ಆದ್ಯತೆ ನೀಡಬೇಕು.

ಆಧುನಿಕತೆ ಬೆಳೆದಂತೆ ಮನುಷ್ಯನ ಯೋಚನಾ ಲಹರಿಯೂ ಬದಲಾಗುತ್ತಿದೆ. ಸಾಮಾಜಿಕ ಜಾಲತಾಣಗಳು ನಮ್ಮನ್ನು ನಿಷ್ಕ್ರಿಯರನ್ನಾಗಿಸುತ್ತಿವೆ. ಸಾಧಕ-ಬಾಧಕಗಳ ಅರಿಯುವುದು ಇಂದಿನ ಅಗತ್ಯವಾಗಿದೆ ಎಂದರು.

ಗ್ರಾಮದ ಗಂಗಾಧರ್ ಮಾತನಾಡಿ, ಶರೀರವಿದ್ದರೆ ಹೇಗಾದರೂ ಬದುಕಬಹುದು. ವಾಹನ ಚಲಾಯಿಸುವಾಗ ಎಚ್ಚರಿಕೆ ವಹಿಸಬೇಕೆಂದರು.

ರೆಡ್ ಕ್ರಾಸ್ ಸಂಸ್ಥೆಯಿಂದ ವಿದ್ಯಾರ್ಥಿಗಳಿಗೆ ಉಚಿತ ಪ್ರಾಥಮಿಕ ಚಿಕಿತ್ಸಾ ಕಿಟ್ ವಿತರಿಸಲಾಯಿತು.

## ಚೌಡೇನಹಳ್ಳಿಯಲ್ಲಿ ಸುಧಾರಿತ ರಾಗಿ ತಳಿ ಪರಿಚಯ

**ಕನ್ನಡ ಪೋಸ್ಟ್ ನ್ಯೂಸ್ ನೆಟ್ವರ್ಕ್**

ಹಾಸನ: ಕಾರೆಕೆರೆ ಕೃಷಿ ಮಹಾವಿದ್ಯಾಲಯದ ಬಿಎಸ್ಸಿ ಅಂತಿಮ ವರ್ಷದ ಕೃಷಿ ವಿದ್ಯಾರ್ಥಿಗಳು ಚನ್ನರಾಯಪಟ್ಟಣ ತಾಲ್ಲೂಕಿನ ಚೌಡೇನಹಳ್ಳಿ ಗ್ರಾಮದಲ್ಲಿ ಹಮ್ಮಿಕೊಂಡಿರುವ ಗ್ರಾಮೀಣ ಕೃಷಿ ಕಾರ್ಯಾನುಭವ ಶಿಬಿರದಲ್ಲಿ ಸುಧಾರಿತ ರಾಗಿ ತಳಿಗಳ ಪರಿಚಯ ಕಾರ್ಯಕ್ರಮ ನಡೆಸಿಕೊಟ್ಟರು.

ಉತ್ತಮ ಇಳುವರಿ ಪಡೆಯಲು ಸುಧಾರಿತ ತಳಿಗಳ ಆಯ್ಕೆ, ರೋಗ-ಕೀಟ ನಿರೋಧಕತೆ, ಬರ ಸಹಿಷ್ಣುತೆ ಹಾಗು ಬೆಳೆ ಅವಧಿಯ ಕುರಿತು ವೈಜ್ಞಾನಿಕ ಮಾಹಿತಿ ಒದಗಿಸಲಾಯಿತು.

ಕಾರ್ಯಕ್ರಮದ ಅಂಗವಾಗಿ ಮೊದಲು ವಿವಿಧ ಸುಧಾರಿತ ರಾಗಿ ತಳಿಗಳ ಮಾಹಿತಿಯನ್ನು ಸಂಗ್ರಹಿಸಿ, ತಳಿಯ ಹೆಸರು, ಬೆಳೆ ಅವಧಿ, ಕಾಳಿನ ಬಣ್ಣ ಹಾಗೂ ಪ್ರಮುಖ ವಿಶೇಷ ಗುಣಲಕ್ಷಣಗಳನ್ನು ಒಳಗೊಂಡ ಮಾಹಿತಿಯುಕ್ತ ಪಟ್ಟಿ ಸಿದ್ಧಪಡಿಸಲಾಯಿತು. ಬಳಿಕ ರಾಗಿ ತಳಿಗಳ ಕುರಿತು ರೈತರಿಗೆ ಅರಿವು ಮೂಡಿಸಲಾಯಿತು.



ಕೆಲವು ಸುಧಾರಿತ ರಾಗಿ ತಳಿಗಳು ಬೆಂಕಿ ರೋಗ, ಬೇರು ಕೊಳೆ ರೋಗ ಮುಂತಾದ ರೋಗಗಳಿಗೆ ಹಾಗೂ ಬೇರು ಗಿಡಹೇನು, ಕಾಂಡ ಕೊರೆಯುವ ಹುಳು ಮತ್ತು ಮಿಡತೆ ಮುಂತಾದ ಕೀಟಗಳಿಗೆ ನಿರೋಧಕ ಅಥವಾ ಸಹಿಷ್ಣು ಗುಣಗಳನ್ನು ಹೊಂದಿರುವುದನ್ನು ರೈತರಿಗೆ ತಿಳಿಸಲಾಯಿತು.

ಅಲ್ಲದೆ, ಕೆಲವು ತಳಿಗಳು ಬರ ಪರಿಸ್ಥಿತಿಯನ್ನು ಸಹಿಸಿಕೊಳ್ಳುವ ಸಾಮರ್ಥ್ಯ ಹೊಂದಿದ್ದು, ಕಾಳು ಉದುರುವಿಕೆ ಕಡಿಮೆ ಇರುವಂತಹ ಗುಣಗಳನ್ನು ಹೊಂದಿವೆ. ಸ್ಥಳೀಯ ಮಣ್ಣು, ಹವಾಮಾನ ಹಾಗೂ ಕೃಷಿ ಪರಿಸ್ಥಿತಿಗೆ ಅನುಗುಣವಾಗಿ ಸೂಕ್ತ ರಾಗಿ ತಳಿಯನ್ನು ಆಯ್ಕೆ ಮಾಡಿಕೊಳ್ಳುವ ಮಹತ್ವವನ್ನು ಮನವರಿಕೆ ಮಾಡಿಕೊಡಲಾಯಿತು.

# ವಸತಿ ನಿಲಯಗಳಿಗೆ ಅನುದಾನ ಕೊರತೆ

## ವಿದ್ಯಾರ್ಥಿಗಳ ಸಮಸ್ಯೆ ಕೇಳೋರಿಲ್ಲ । ಅಸಹಾಯಕತೆ ವ್ಯಕ್ತಪಡಿಸುತ್ತಿರುವ ಅಧಿಕಾರಿಗಳು

**ಕನ್ನಡ ಪೋಸ್ಟ್ ನ್ಯೂಸ್ ನೆಟ್ವರ್ಕ್**

ಹಾಸನ: ಸಮಾಜ ಕಲ್ಯಾಣ ಇಲಾಖೆಯ ವಸತಿ ನಿಲಯಗಳಲ್ಲಿ ಮಂಜೂರಾತಿಗಿಂತ ಅಧಿಕ ವಿದ್ಯಾರ್ಥಿಗಳು ಪ್ರವೇಶ ಪಡೆದಿರುವ ಹಿನ್ನೆಲೆಯಲ್ಲಿ ಅನುದಾನದ ಕೊರತೆಯಿಂದ ಮಕ್ಕಳಿಗೆ ಮೂಲಸೌಕರ್ಯ ಕಲ್ಪಿಸುವುದು ಸವಾಲಿನ ಕೆಲಸವಾಗಿದೆ.

ಜಿಲ್ಲೆಯಲ್ಲಿ ಮೆಟ್ರಿಕ್ ನಂತರದ 36 ಹಾಗೂ ಮೆಟ್ರಿಕ್ ಪೂರ್ವ 58 ವಸತಿ ನಿಲಯಗಳಿವೆ.

ಮೆಟ್ರಿಕ್ ನಂತರದ ನಿಲಯಗಳಿಗೆ 2,800 ವಿದ್ಯಾರ್ಥಿಗಳನ್ನು ಸೇರಿಸಿಕೊಳ್ಳಲು ಅವಕಾಶ ಇದೆಯಾದರೂ 5,600 ಮಕ್ಕಳು ಪ್ರವೇಶ ಪಡೆದಿದ್ದಾರೆ. ಅದೇ ರೀತಿ ಮೆಟ್ರಿಕ್ ಪೂರ್ವ ನಿಲಯಗಳಲ್ಲಿ 3,500 ವಿದ್ಯಾರ್ಥಿಗಳಿದ್ದು ಸರ್ಕಾರದಿಂದ ಬರುವ ಅನುದಾನವನ್ನು ಎಲ್ಲಾ ಮಕ್ಕಳಿಗೂ ಸಮರ್ಪಕವಾಗಿ ಹಂಚಿಕೆ ಮಾಡಲು ಸಾಧ್ಯವಾಗುತ್ತಿಲ್ಲವೆಂದು ಅಧಿಕಾರಿಗಳು ಅಸಹಾಯಕತೆ ವ್ಯಕ್ತಪಡಿಸಿದ್ದಾರೆ.

36ರಲ್ಲಿ 14 ನಿಲಯಗಳು ಬಾಡಿಗೆ ಕಟ್ಟಡದಲ್ಲಿದ್ದು, 22 ಹಾಸ್ಟೆಲ್‌ಗಳು ಸ್ವಂತ ಕಟ್ಟಡ ಹೊಂದಿವೆ. ನಿಲಯಗಳ ವಿದ್ಯುತ್ ವೆಚ್ಚ ಮತ್ತಿತರ ಖರ್ಚು ಹೆಚ್ಚುತ್ತಿರುವುದು ಅನುದಾನ ಹೊಂದಿಸಲು ಸಾಧ್ಯವಾಗುತ್ತಿಲ್ಲ. ಇದೆಲ್ಲದರ ಜೊತೆಗೆ ಮೆನು ಪ್ರಕಾರವೇ ಊಟ, ಉಪಾಹಾರ ನೀಡಬೇಕಿದ್ದು ವಸತಿ ನಿಲಯಗಳ ನಿರ್ವಹಣೆಗೆ ಭಾರೀ ತೊಡಕಾಗಿದೆ.

### 3 ತಿಂಗಳಿಗೆ 20 ಲ.ರೂ. ಅನುದಾನ

ಸಮಾಜ ಕಲ್ಯಾಣ ಇಲಾಖೆಯಿಂದ ನಿರ್ವಹಿಸಲ್ಪಡುತ್ತಿರುವ ಹಾಸ್ಟೆಲ್‌ಗಳಿಗೆ




ಪ್ರತಿ 3 ತಿಂಗಳಿಗೆ 20 ಲಕ್ಷ ರೂ. ಅನುದಾನ ಲಭ್ಯವಾಗುತ್ತಿದೆ. ವರ್ಷಕ್ಕೆ 80 ಲ.ರೂ. ಮಾತ್ರ ಸಿಗುತ್ತಿದ್ದು ಒಂದು ಹಾಸ್ಟೆಲ್‌ಗೆ ಪ್ರತಿ ತಿಂಗಳು 50 ಸಾವಿರ ರೂ. ಮಾತ್ರ ಹಂಚಿಕೆ ಮಾಡಬಹುದಾಗಿದೆ. ಆದರೆ ಇಷ್ಟು ಕಡಿಮೆ ಹಣದಲ್ಲಿ ನಿರ್ವಹಣೆ ಅಸಾಧ್ಯ. ವಿದ್ಯಾರ್ಥಿಗಳಿಗೆ ಸೋಪ್ ಕಿಟ್, ಬೆಡ್, ಕಾಟ್, ಸೋಲಾರ್ ವಾಟರ್ ಹೀಟರ್, ತಟ್ಟೆ, ಲೋಟ, ಸೊಳ್ಳೆ ಪರದೆ ಸೇರಿ ಮತ್ತಿತರ ಸೌಲಭ್ಯ ಕಲ್ಪಿಸಬೇಕು. ಆದರೆ ಇಷ್ಟು ಕಡಿಮೆ ಹಣದಲ್ಲಿ ಎಲ್ಲವನ್ನೂ ಪೂರೈಸುವುದು ಸಾಧ್ಯವಾಗುತ್ತಿಲ್ಲ.

### ದುಪ್ಪಟ್ಟು ಪ್ರವೇಶಕ್ಕೆ ಕಾರಣ ಏನು?

ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆ ಹಾಗೂ ಸಮಾಜ ಕಲ್ಯಾಣ ಇಲಾಖೆ ವಸತಿ ನಿಲಯಗಳಲ್ಲಿ ಭಾರೀ ವ್ಯತ್ಯಾಸವಿದೆ. ಬಿಸಿಎಂ ಹಾಸ್ಟೆಲ್‌ಗಳಲ್ಲಿ ಮಂಜೂರಾದ ಸೀಟುಗಳನ್ನಷ್ಟೇ ಭರ್ತಿ ಮಾಡಿಕೊಳ್ಳಲಾಗುತ್ತದೆ. ಆದರೆ ಸಮಾಜ ಕಲ್ಯಾಣ ಇಲಾಖೆಯಲ್ಲಿ ಎಷ್ಟೇ ಮಕ್ಕಳು ಪ್ರವೇಶಕ್ಕೆ ಅರ್ಜಿ ಸಲ್ಲಿಸಿದರೂ ಕಲ್ಪಿಸಿಕೊಡಬೇಕಾಗುತ್ತದೆ. ಹೀಗಾಗಿ ವಿದ್ಯಾರ್ಥಿಗಳ ಸಂಖ್ಯೆ ಅಗತ್ಯಕ್ಕಿಂತ ದುಪ್ಪಟ್ಟಾಗಿದೆ. ಜೊತೆಗೆ ಉತ್ತರ ಕರ್ನಾಟಕದ ಜಿಲ್ಲೆಗಳಿಂದ ಹೆಚ್ಚಿನ ಸಂಖ್ಯೆಯಲ್ಲಿ ಈ ವರ್ಷ ವಿದ್ಯಾರ್ಥಿಗಳು ಪ್ರವೇಶ ಪಡೆದಿದ್ದಾರೆ. ಸಕಲೇಶಪುರದ ಬಿಇಡಿ ಕಾಲೇಜು ಒಂದರಲ್ಲಿ ಪೂರ್ತಿ ಉತ್ತರ ಕರ್ನಾಟಕದ ವಿದ್ಯಾರ್ಥಿಗಳೇ ಇದ್ದು ಸ್ಥಳೀಯರು ಇಲ್ಲದೇ ಇರುವುದು ಇದಕ್ಕೆ ತಾಜಾ ನಿದರ್ಶನವಾಗಿದೆ.

### ಹಾಸ್ಟೆಲ್ ಉಳಿಸಿಕೊಳ್ಳುವ ಪ್ರಯತ್ನ

ವಿದ್ಯಾರ್ಥಿಗಳ ಸಂಖ್ಯೆ ಕಡಿಮೆಯಾದರೆ ಮುಂದಿನ ವರ್ಷದಿಂದ ಹಾಸ್ಟೆಲ್ ಮುಚ್ಚಬೇಕಾಗುತ್ತದೆಂಬ ಆತಂಕದಿಂದ ವಾರ್ಡನ್‌ಗಳೇ ಹೊರ ಜಿಲ್ಲೆಯಿಂದ ವಿದ್ಯಾರ್ಥಿಗಳನ್ನು ಕರೆಸಿಕೊಳ್ಳುವ ಪದ್ಧತಿಯೂ ಗೌಪ್ಯವಾಗಿ ನಡೆಯುತ್ತದೆ. ಕಳೆದ ವರ್ಷಕ್ಕಿಂತ ಈ ವರ್ಷ ಹೆಚ್ಚು ವಿದ್ಯಾರ್ಥಿಗಳಿದ್ದರಷ್ಟೇ ಆ ಹಾಸ್ಟೆಲ್ ಉಳಿಯುತ್ತದೆಂಬ ಸರ್ಕಾರದ ನಿಯಮ ಮಕ್ಕಳ ಸಂಖ್ಯೆ ಹೆಚ್ಚಾಗಲು ಕಾರಣವಾಗಿದೆ.

> ವ್ಯಾಸಂಗದ ದೃಷ್ಟಿಯಿಂದ ದೂರದ ಊರುಗಳಿಂದ ಬಂದು ಹಾಸ್ಟೆಲ್‌ಗಳಲ್ಲಿ ಪ್ರವೇಶ ಪಡೆದಿರುವ ಮಕ್ಕಳಿಗೆ ಮೂಲಸೌಲಭ್ಯ ಕಲ್ಪಿಸಬೇಕಾಗುತ್ತದೆ. ಹಂತ ಹಂತವಾಗಿ ಅಗತ್ಯ ಸಾಮಾಗ್ರಿ ಖರೀದಿಸಿ ಕೊಡಲಾಗುವುದು. ವಿದ್ಯಾರ್ಥಿಗಳಿಗೆ ತೊಂದರೆಯಾಗದಂತೆ ಕ್ರಮ ವಹಿಸಲಾಗುವುದು.
>
> **-ಪಿ.ದೂದ್‌ಪೀರ್, ಸಮಾಜ ಕಲ್ಯಾಣ ಇಲಾಖೆ ಉಪನಿರ್ದೇಶಕ**

### ಕಿಟಕಿಗೆ ಪರದೆಯೂ ಇಲ್ಲ

ವಿದ್ಯಾರ್ಥಿ ನಿಲಯದಲ್ಲಿ ವಾಸಿಸುತ್ತಿರುವ ವಿದ್ಯಾರ್ಥಿನಿಯರಿಗೆ ಕಿಟಕಿ ಪರದೆ, ಸ್ಲಿಪ್ಪರ್ ಸ್ಟ್ಯಾಂಡ್, ಮ್ಯಾಟ್, ಸೊಳ್ಳೆ ಕಾಯಿಲ್, ಬೆಡ್ ಹಾಗೂ ಕಾಟ್‌ಗಳಂತಹ ಕನಿಷ್ಟ ಮೂಲಸೌಲಭ್ಯ ಕಲ್ಪಿಸುತ್ತಿಲ್ಲವೆಂದು ವಿದ್ಯಾರ್ಥಿಗಳು ಆಕ್ರೋಶ ವ್ಯಕ್ತಪಡಿಸಿದ್ದಾರೆ.

ಕಿಟಕಿಗಳಿಗೆ ಪರದೆಗಳಿಲ್ಲದ ಕಾರಣ ಬಟ್ಟೆ ಬದಲಾಯಿಸುವ ಸಂದರ್ಭದಲ್ಲಿಯೂ ಬೆಡ್ ಶೀಟ್‌ಗಳನ್ನು ಬಳಸಬೇಕಾದ ಮುಜುಗರದ ಪರಿಸ್ಥಿತಿ ನಿರ್ಮಾಣವಾಗಿದೆ. ರಾತ್ರಿಯ ವೇಳೆ ಸೊಳ್ಳೆಗಳ ಕಾಟ ಹಾಗು ಉಸಿರುಗಟ್ಟುವ ವಾತಾವರಣದಿಂದ ವಿದ್ಯಾರ್ಥಿನಿಯರ ಶಿಕ್ಷಣ, ಆರೋಗ್ಯ ಮತ್ತು ಮಾನಸಿಕ ನೆಮ್ಮದಿಯ ಮೇಲೂ ಪರಿಣಾಮ ಬೀರುತ್ತಿದೆ.

# ಚಿಕ್ಕಮತ್ತಿಘಟ್ಟದಲ್ಲಿ ಗ್ರಾಮೀಣ ಕೃಷಿ ಶಿಬಿರ



**ಕನ್ನಡ ಪೋಸ್ಟ್ ನ್ಯೂಸ್ ನೆಟ್ವರ್ಕ್**

ಚನ್ನರಾಯಪಟ್ಟಣ: ತಾಲ್ಲೂಕಿನ ದಂಡಿಗನಹಳ್ಳಿ ಹೋಬಳಿ ಚಿಕ್ಕಮತ್ತಿಘಟ್ಟ ಗ್ರಾಮದಲ್ಲಿ ಹಾಸನ ಕಾರೇಕೆರೆ ಕೃಷಿ ಕಾಲೇಜಿನ ವಿದ್ಯಾರ್ಥಿಗಳು ನಡೆಸುತ್ತಿರುವ ಗ್ರಾಮೀಣ ಕೃಷಿ ಕಾರ್ಯಾನುಭವ ಶಿಬಿರದ ಅಂಗವಾಗಿ ಮಾಹಿತಿ ಕಾರ್ಯಾಗಾರ ಹಮ್ಮಿಕೊಳ್ಳಲಾಗಿತ್ತು.

ರೈತರು ಒಗ್ಗಟ್ಟಿನಿಂದ ಸಕ್ರಿಯವಾಗಿ ಭಾಗವಹಿಸುವಿಕೆಯಿಂದ ಪರಸ್ಪರ ವಿಚಾರಗಳ ವಿನಿಮಯದ ಜೊತೆಗೆ ಗ್ರಾಮೀಣತೆಯ ಮೌಲ್ಯಮಾಪನ ಹೆಚ್ಚಿಸುವ ಕಾರ್ಯಕ್ರಮವನ್ನು ನವೀನ ಹಾಗೂ ಸಂವಾದಾತ್ಮಕ ರೀತಿಯಲ್ಲಿ ಆಯೋಜಿಸಿ ರೈತರ ಮೆಚ್ಚುಗೆ ಗಳಿಸಿದರು.

ಕಾರ್ಯಕ್ರಮದಲ್ಲಿ ರೈತರು ಕೇವಲ ಮಾಹಿತಿ ನೀಡುವವರಾಗಿರದೆ, ಗ್ರಾಮದ ಕೃಷಿ ಪರಿಸ್ಥಿತಿ, ಪ್ರಮುಖ ಸಮಸ್ಯೆಗಳು, ಸಂಪನ್ಮೂಲ ಹಾಗೂ ಅಭಿವೃದ್ಧಿಯ ಅಗತ್ಯತೆಗಳನ್ನು ಗುರುತಿಸುವಲ್ಲಿ ಸಕ್ರಿಯವಾಗಿ ಭಾಗವಹಿಸಿದರು.

ಕೃಷಿ ಮಹಾವಿದ್ಯಾಲಯದ ಪ್ರಭಾರ ಡೀನ್ ಡಾ. ಎಸ್.ಟಿ.ಬೈರಪ್ಪ, ಮುಖ್ಯ ಸಂಯೋಜಕಿ ಡಾ.ಎಸ್.ಜಿ. ಶಶಿಕಲಾ, ಡಾ.ಎಂ.ಸಹನ. ಡಾ.ಎಲ್. ಚಂದನ, ಡಾ.ಎಸ್.ಸ್ಮಿತಾ. ಡಾ.ಗಣೇಶ್ ಪ್ರಸಾದ್ ಹಾಗು ಕಾಲೇಜಿನ ಇನ್ನಿತರ ಪ್ರಾಧ್ಯಾಪಕರು ಉಪಸ್ಥಿತರಿದ್ದರು.

ಊರಿನ ಸಾಮಾಜಿಕ ನಕ್ಷೆ, ಸಂಪನ್ಮೂಲ ನಕ್ಷೆ, ಕಾಲೋಚಿತ ಬೆಳೆ ನಕ್ಷೆ ಹಾಗೂ ಸಮಸ್ಯೆಗಳ ಆದ್ಯತಾ ಕ್ರಮ ಮುಂತಾದ ಚಟುವಟಿಕೆಗಳನ್ನು ಅವರದೇ ಆದ ಅನುಭವ ಮತ್ತು ಜ್ಞಾನವನ್ನು ಬಳಸಿಕೊಂಡು ನಡೆಸಲಾಯಿತು. ಬಣ್ಣದ ಕಾಗದಗಳು, ಬೀಜಗಳು, ಕಡ್ಡಿಗಳು ಹಾಗೂ ಸ್ಥಳೀಯವಾಗಿ ಲಭ್ಯವಿರುವ ವಸ್ತುಗಳನ್ನು ಬಳಸಿಕೊಂಡು ರೈತರು ತಮ್ಮ ಗ್ರಾಮದ ಕೃಷಿ ಸಂಪನ್ಮೂಲಗಳು ಮತ್ತು ಸಮಸ್ಯೆಗಳನ್ನು ಅತ್ಯಂತ ಸೃಜನಾತ್ಮಕವಾಗಿ ಪ್ರದರ್ಶಿಸಿದರು.

ಗ್ರಾಮದ ಮುಖಂಡರು, ಯುವ ಪ್ರತಿನಿಧಿಗಳು, ಪ್ರಗತಿಪರ ರೈತರು, ಗ್ರಾಮಸ್ಥರು ಸೇರಿ ಚರ್ಚಾ ಮತ್ತು ಗುಂಪು ಚಟುವಟಿಕೆಗಳ ಮೂಲಕ ಮಣ್ಣಿನ ಫಲವತ್ತತೆ, ನೀರಿನ ಲಭ್ಯತೆ, ಬೆಳೆ ರೋಗಕೀಟ ಸಮಸ್ಯೆಗಳು, ಮಾರುಕಟ್ಟೆ ಹಾಗೂ ಸಾರಿಗೆ ಸೌಲಭ್ಯಗಳು ಸೇರಿದಂತೆ ಹಲವು ಸಮಸ್ಯೆಗಳನ್ನು ಗುರುತಿಸಿ, ಅವುಗಳಿಗೆ ಸ್ಥಳೀಯವಾಗಿ ಕೈಗೊಳ್ಳಬಹುದಾದ ಪರಿಹಾರಗಳ ಕುರಿತು ಅಭಿಪ್ರಾಯ ಹಂಚಿಕೊಂಡರು. ಕಾರ್ಯಕ್ರಮವು ರೈತರ ಸ್ಥಳೀಯ ಜ್ಞಾನವನ್ನು ಗೌರವಿಸುವುದರ ಜೊತೆಗೆ, ಕೃಷಿ ಅಭಿವೃದ್ಧಿಯಲ್ಲಿ ಅವರ ಭಾಗವಹಿಸುವಿಕೆಯ ಮಹತ್ವವನ್ನು ಎತ್ತಿ ತೋರಿಸಿತು. ಈ ಕಾರ್ಯಕ್ರಮದಲ್ಲಿ ಊರಿನಲ್ಲಿ ಎತ್ತಿನಗಾಡಿ ಹಾಗೂ ಟ್ರಾಕ್ಟರ್‌ಗಳ ಅದ್ದೂರಿ ಮೆರವಣಿಗೆ ಎಲ್ಲರ ಗಮನ ಸೆಳೆಯಿತು.

# ಪಾರ್ಶ್ವನಾಥ ಸ್ವಾಮಿಗೆ ಮಹಾಮಸ್ತಕಾಭಿಷೇಕ

**ಕನ್ನಡ ಪೋಸ್ಟ್ ನ್ಯೂಸ್ ನೆಟ್ವರ್ಕ್**

ಶ್ರವಣಬೆಳಗೊಳ: ಇಲ್ಲಿನ ಚಂದ್ರಗಿರಿ ಚಿಕ್ಕಬೆಟ್ಟದಲ್ಲಿ 23ನೇ ತೀರ್ಥಂಕರ ಭಗವಾನ್ ಪಾರ್ಶ್ವನಾಥ ಸ್ವಾಮಿಯ ಬಸದಿಯಲ್ಲಿ ಮೋಕ್ಷ ಕಲ್ಯಾಣ ಮುಕುಟ ಸಪ್ತಮಿಯ ಪ್ರಯುಕ್ತ ಅಂತರಾಳ ಪಾರ್ಶ್ವನಾಥ ಸ್ವಾಮಿಗೆ ವಿಶೇಷ ಪೂಜಾ ಕೈಂಕರ್ಯ ಹಾಗೂ ಮಹಾಮಸ್ತಕಾಭಿಷೇಕ ನೆರವೇರಿಸಲಾಯಿತು.

ಕ್ಷೇತ್ರದ ಪೀಠಾಧಿಪತಿ ಸ್ವಸ್ತಿಶ್ರೀ ಅಭಿನವ ಚಾರುಕೀರ್ತಿ ಭಟ್ಟಾರಕ ಸ್ವಾಮೀಜಿ ಮಾರ್ಗದರ್ಶನದಲ್ಲಿ ನಡೆದ ಧಾರ್ಮಿಕ ಕಾರ್ಯಕ್ರಮದಲ್ಲಿ ಚಂದ್ರಗಿರಿಯ 18 ಅಡಿ ಎತ್ತರದ, ಸಪ್ತಫಣಾಧಾರಿ ಅಂತರಾಳ ಪಾರ್ಶ್ವನಾಥ ಸ್ವಾಮಿಯ ಸನ್ನಿಧಿಯಲ್ಲಿ ಶಾಂತಿಧಾರೆ ಹಾಗು ನವಕಲಶಗಳನ್ನು ಪ್ರತಿಷ್ಠಾಪಿಸಲಾಯಿತು.

ಜಲಾಭಿಷೇಕದ ಬಳಿಕ ಎಳನೀರು, ಕಬ್ಬಿನ ಹಾಲು, ಕ್ಷೀರ, ಕಲ್ಕಚೂರ್ಣ, ಅರಿಷಿಣ, ಶ್ರೀಗಂಧ ಹಾಗೂ ಅಷ್ಟಗಂಧಗಳಿಂದ ವಿವಿಧ



ಅಭಿಷೇಕಗಳನ್ನು ನೆರವೇರಿಸಲಾಯಿತು. ಬಳಿಕ ಬೃಹತ್ ಪುಷ್ಪಹಾರವನ್ನು ಸಮರ್ಪಿಸಿ ಪುಷ್ಪವೃಷ್ಟಿ ಮಾಡಲಾಯಿತು. ಮಹಾಶಾಂತಿಧಾರೆ ಹಾಗೂ ಮಹಾಮಂಗಳಾರತಿಯೊಂದಿಗೆ ಪೂಜಾ ವಿಧಿಗಳು ಸಂಪನ್ನಗೊಂಡವು.

ಮೋಕ್ಷ ಕಲ್ಯಾಣದ ಸಂಕೇತವಾಗಿ ನಿರ್ವಾಣ ಲಡ್ಡುವನ್ನು ಅರ್ಪಿಸಿದ ಸಂದರ್ಭದಲ್ಲಿ ನೆರೆದಿದ್ದ ಭಕ್ತರು ತೀರ್ಥಂಕರರ ಜಯಘೋಷ ಮೊಳಗಿಸಿ ಭಕ್ತಿಭಾವ ಮೆರೆದರು. ಕ್ಷೇತ್ರದಲ್ಲಿರುವ ಪಾರ್ಶ್ವನಾಥ ಸ್ವಾಮಿಯ ಎಲ್ಲಾ ಬಸದಿಗಳಲ್ಲಿಯೂ ಮುಕುಟ ಸಪ್ತಮಿ ಪ್ರಯುಕ್ತ ವಿಶೇಷ ಪೂಜಾ ಕೈಂಕರ್ಯಗಳು ನಡೆದವು.

ಮುನಿಶ್ರೀ ಪ್ರಭಾಕರ್ ಸಾಗರ ಮಹಾರಾಜರು, ಕ್ಷುಲ್ಲಿಕಾಶ್ರೀ ಅಮೃತಮತಿ ಮಾತಾಜಿ ಹಾಗು ಕ್ಷುಲ್ಲಿಕಾಶ್ರೀ ಅಮರಜ್ಯೋತಿ ಮಾತಾಜಿ ಸಾನಿಧ್ಯ ವಹಿಸಿದ್ದರು.

ಪೂಜೆಯಲ್ಲಿ ಪಾಲ್ಗೊಂಡ ಭಕ್ತರಿಗೆ ಗಂಧೋದಕ ವಿತರಿಸಲಾಯಿತು. ಹಿಂದೂಪುರದ ನಾಗೇಂದ್ರ ಕುಮಾರ್ ಕುಟುಂಬದವರು ಸೇವಾಕರ್ತರಾಗಿ, ವಿಮಲ್ ಕುಮಾರ್ ತಂಡದವರು ಪೂಜಾ ನೇತೃತ್ವ ವಹಿಸಿದ್ದರು. ವ್ಯವಸ್ಥಾಪಕ ಜೀವೇಂದ್ರ ಕುಮಾರ್, ರಾಮದಾಸ್ ಸೇರಿ ಮತ್ತಿತರರು ಪಾಲ್ಗೊಂಡಿದ್ದರು.

# ವಿವಿಧ ಸಾಲ ಹಾಗೂ ಸಹಾಯಧನ ಸೌಲಭ್ಯಗಳಿಗೆ ಅರ್ಜಿ ಆಹ್ವಾನ

**ಕನ್ನಡ ಪೋಸ್ಟ್ ನ್ಯೂಸ್ ನೆಟ್ವರ್ಕ್**

ಹಾಸನ : ಕರ್ನಾಟಕ ಅಲ್ಪಸಂಖ್ಯಾತರ ಅಭಿವೃದ್ಧಿ ನಿಗಮ(ನಿ) ಹಾಸನ ಜಿಲ್ಲೆ ವತಿಯಿಂದ ಜಿಲ್ಲಾದ್ಯಂತ ವಾಸವಿರುವ ಮತೀಯ ಅಲ್ಪಸಂಖ್ಯಾತರಾದ ಮುಸ್ಲಿಂ, ಜೈನ್, ಬೌದ್ಧ, ಸಿಖ್ಖ್ ಹಾಗೂ ಪಾರ್ಸಿ ಜನಾಂಗದವರಿಗೆ 2026-27ನೇ ಸಾಲಿನಲ್ಲಿ ಅರಿವು (ವಿದ್ಯಾಭ್ಯಾಸ ಸಾಲ) ಯೋಜನೆ, ಸ್ವಾವಲಂಬಿ ಸಾರಥಿ ಯೋಜನೆ, ಶ್ರಮಶಕ್ತಿ ಯೋಜನೆ, ವೃತ್ತಿ ಪ್ರೋತ್ಸಾಹ ಯೋಜನೆ, ರೇಷ್ಮೆ ನೂಲು ಬಿಚ್ಚಾಣಿಕೆ ಉದ್ಯಮಕ್ಕೆ ಪ್ರೋತ್ಸಾಹ ಯೋಜನೆ, ಗಂಗಾ ಕಲ್ಯಾಣ ಯೋಜನೆ, ನವೋದಯ ಯೋಜನೆ, ಫಾಸ್ಟ್ ಫುಡ್ ಟ್ರಕ್ /ಟೈಲರ್ ಕಿಚನ್ ಫುಡ್ (ಕಿಯೋಸ್ಟ್)ಯೋಜನೆ, ಅಲ್ಪಸಂಖ್ಯಾತರ ಸಮುದಾಯದ ಮಹಿಳಾ ಸ್ವ-ಸಹಾಯ ಗುಂಪುಗಳಿಗೆ ಸ್ವಯಂ ಉದ್ಯೋಗ ಪ್ರೋತ್ಸಾಹ ಯೋಜನೆ, ಸಿಖ್ಖ್ ಲಿಗಾರ ಸಮುದಾಯದ ಜನರ ಆರ್ಥಿಕ ಸಬಲೀಕರಣಕ್ಕೆ ಪ್ರೋತ್ಸಾಹ ಯೋಜನೆ, ಸಮುದಾಯ ಆಧಾರಿತ ತರಬೇತಿ ಯೋಜನೆ, ವಿದೇಶಿ ವಿದ್ಯಾಭ್ಯಾಸ ಸಾಲ, ವ್ಯಾಪಾರ/ಉದ್ದಿಮೆ ನೇರಸಾಲ ಯೋಜನೆ, ಸಾಂತ್ವನ ಯೋಜನೆಗಳಡಿಯಲ್ಲಿ ನಿಗಮದಿಂದ ಸಾಲ ಹಾಗೂ ಸಹಾಯಧನ ಸೌಲಭ್ಯಗಳನ್ನು ನೀಡಲು ಸೆ. 17ರವರೆಗೆ ಆನ್‌ಲೈನ್ Website: kmdconline.karnataka.gov.in ಮೂಲಕ ಅರ್ಜಿಗಳನ್ನು ಆಹ್ವಾನಿಸಲಾಗಿದೆ ಎಂದು ಕರ್ನಾಟಕ ಅಲ್ಪಸಂಖ್ಯಾತರ ಅಭಿವೃದ್ಧಿ ನಿಗಮದ ಜಿಲ್ಲಾ ವ್ಯವಸ್ಥಾಪಕರು ತಿಳಿಸಿದ್ದಾರೆ.

# ಶಾಂತಿ ಸೌಹಾರ್ದತೆಯಿಂದ ಹಬ್ಬ ಆಚರಿಸಲು ಸಲಹೆ



**ಕನ್ನಡ ಪೋಸ್ಟ್ ನ್ಯೂಸ್ ನೆಟ್ವರ್ಕ್**

ಬೇಲೂರು: ಎಲ್ಲ ಧರ್ಮೀಯರು ಸೌಹಾರ್ದತೆಯಿಂದ ಹಬ್ಬ ಹರಿದಿನಗಳನ್ನು ಯಾವುದೆ ಅಹಿತಕರ ಘಟನೆಗೆ ಅವಕಾಶವಿಲ್ಲದಂತೆ ಆಚರಿಸುತ್ತಿದ್ದು, ಈದ್ ಮಿಲಾದ್ ಹಬ್ಬವನ್ನೂ ಸಹ ಇಲಾಖೆ ನಿಯಮಗಳನ್ನು ಮೀರದೆ ಆಚರಿಸಬೇಕು. ಯಾರಾದರೂ ನಿಯಮ ಮೀರಿದರೆ ಕಾನೂನು ಕ್ರಮ ಕೈಗೊಳ್ಳಲಾಗುವುದು ಎಂದು ಅರಸೀಕೆರೆ ಡಿವೈಎಸ್‌ಪಿ ಗೋಪಿ ಹೇಳಿದರು.

ಈದ್‌ಮಿಲಾದ್ ಹಬ್ಬದ ಅಂಗವಾಗಿ ಪಟ್ಟಣದ ಪೊಲೀಸ್ ಠಾಣೆ ಆವರಣದಲ್ಲಿ ನಡೆದ ಸರ್ವಧರ್ಮೀಯರ ಶಾಂತಿ ಸಭೆಯಲ್ಲಿ ಮಾತನಾಡಿದ ಅವರು, ಪ್ರತಿಯೊಬ್ಬರೂ ಅವರವರ ಹಬ್ಬಗಳನ್ನು ಸಂತೋಷದಿಂದ ಶಾಂತಿಯುತವಾಗಿ ಆಚರಿಸಬೇಕು. ಸೌಹಾರ್ದತೆಗೆ ಹೆಸರಾಗಿರುವ ಬೇಲೂರಿನಲ್ಲಿ ಇಲ್ಲಿವರಗೆ ಯಾವುದೇ ಅಹಿತಕರ ಘಟನೆ ನಡೆದಿಲ್ಲ. ಮುಂದೆಯೂ ಆಗದಂತೆ ಎಲ್ಲರೂ ಇಲಾಖೆಯೊಂದಿಗೆ ಸಹಕಾರ ನೀಡಬೇಕು. ಮೆರವಣಿಗೆ ಸಂದರ್ಭ ಆಯೋಜಕರು ಕಾನೂನಿನಡಿ ಬರುವ ಕೆಲ ನಿಯಮಗಳನ್ನು ಪಾಲಿಸಬೇಕು. ಈದ್ ಮಿಲಾದ್ ಆಚರಿಸುವ ಸಂಘಟಕರು ನಮ್ಮೊಟ್ಟಿಗೆ ಸಂಪರ್ಕದಲ್ಲಿರಬೇಕು. ಯಾರೂ ಸ್ವತಂತ್ರವಾಗಿ ನಿರ್ಧಾರ ತೆಗೆದುಕೊಳ್ಳಬಾರದು. ಡಿಜೆ ಸೌಂಡ್ ಸಿಸ್ಟಮ್‌ಗೆ ಅವಕಾಶವಿಲ್ಲ. ಸಾಮಾಜಿಕ ಜಾಲತಾಣಗಳಲ್ಲಿ ಇಲ್ಲಸಲ್ಲದ ಸುದ್ದಿ ಬಿತ್ತರಿಸಿದರೆ ಮತ್ತು ಅಪದ್ಧ ಪದಗಳ ಘೋಷಣೆ ಕೂಗಿದರೆ ಅಂತವರ ವಿರುದ್ಧ ಪ್ರಕರಣ ದಾಖಲಿಸಲಾಗುವುದು. ಪೊಲೀಸ್ ಇಲಾಖೆಯಿಂದ ಕೇಳಿದ ಎಲ್ಲ ಮಾಹಿತಿ ನೀಡಬೇಕು. ಫ್ಲೆಕ್ಸ್ ಹಾಕುವಾಗ ವಿವಾದಿತ ಹೆಸರು, ಫೋಟೋಗಳನ್ನು ಹಾಕಬಾರದು. ಮೆರವಣಿಗೆ ತೆರಳುವ ರೂಟ್ ಮ್ಯಾಪ್ ಹಾಕಿಕೊಂಡು ಸರಿಯಾಗಿ ಹೋದರೆ ಪೊಲೀಸ್‌ನವರು ಯಾರನ್ನೂ ಮುಟ್ಟುವುದಿಲ್ಲ. ತಳ್ಳುವುದಿಲ್ಲ. ಸೂಕ್ಷ್ಮ ಸ್ಥಳಗಳಲ್ಲಿ ಬೇಗ ಸಾಗಬೇಕು. ಯಾರಿಗೆ ಏನೇ ಆದರೂ ನಾವೇ ನೋಡಬೇಕಾಗುತ್ತದೆ. ಬೈಕ್‌ಗಳಲ್ಲಿ 3 ರಿಂದ 4 ಜನ ಕುಳಿತು ಓಡಾಡುವುದು, ವೀಲಿಂಗ್ ಮಾಡುವುದನ್ನು ಬಿಟ್ಟು ಸಂತೋಷದಿಂದ ಹಬ್ಬ ಆಚರಿಸಲು ಯುವಕರು ಮುಂದಾಗಬೇಕು. ಈ ಬಗ್ಗೆ ಸಮಾಜದ ಹಿರಿಯರು ತಿಳಿ ಹೇಳಬೇಕು. ಮೆರವಣಿಗೆಯ ಸಂಪೂರ್ಣ ವಿಡಿಯೋ ಮಾಡುವುದರಿಂದ ಪೊಲೀಸ್ ಮಾರ್ಗದರ್ಶನದಂತೆ ನಡೆದುಕೊಳ್ಳಬೇಕು. ರಸ್ತೆ ಅಕ್ಕಪಕ್ಕದಲ್ಲಿ ಫ್ಲೆಕ್ಸ್ ಹಾಕಬಾರದು. ಹಾಕಿದರೆ ತಕ್ಷಣ ತೆಗೆಸಲು ಕ್ರಮ ಕೈಗೊಳ್ಳಲಾಗುವುದು. ಮೆರವಣಿಗೆ ವೇಳೆ ಸಂಘಟಕರು ಎಚ್ಚರಿಕೆಯಿಂದ ಇರಬೇಕುಎಂದರು.

ಪೊಲೀಸ್ ಇನ್ಸ್‌ಪೆಕ್ಟರ್ ರೇವಣ್ಣ ಮಾತನಾಡಿ, ಎಲ್ಲರೂ ಮಹಮದ್ ಪೈಗಂಬರ್ ಜಯಂತಿಯನ್ನು ಅದ್ದೂರಿಯಾಗಿ ಸಂತೋಷದಿಂದ ಆಚರಿಸಿ. ಶಾಂತಿ ಸುವ್ಯವಸ್ಥೆ ಕಾಪಾಡಬೇಕು. ನಿಮ್ಮ ಸಮಿತಿ ಮುಖಂಡರು ಕಾರ್ಯಕ್ರಮ ಉತ್ತಮವಾಗಿ ಮಾಡಬೇಕು.ಇಲ್ಲಿ ಎಲ್ಲರೂ ಅನೋನ್ಯವಾಗಿದ್ದೇವೆ. ಯಾವುದೇ ಘರ್ಷಣೆ ಇಲ್ಲದೆ ಸಂತೋಷದಿಂದ ಹಬ್ಬ ಆಚರಿಸಲು ಮುಂದಾಗಬೇಕು ಎಂದರು.

ಪುರಸಭೆ ಅಧ್ಯಕ್ಷ ಅಕ್ರಂ ಷರೀಫ್ ಮಾತನಾಡಿ, ಪ್ರತಿವರ್ಷದಂತೆ ಈದ್ ಮಿಲಾದ್ ಆಚರಿಸಲಾಗುತ್ತದೆ. ಆದರೆ ಫ್ಲೆಕ್ಸ್-ಬ್ಯಾನರ್ ಹಾಕಲು ಪರ್ಮಿಷನ್ ತೆಗೆದುಕೊಳ್ಳಬೇಕು. ಜಿಲ್ಲೆಯಲ್ಲಿ ಪೊಲೀಸ್ ಇಲಾಖೆಯಿಂದ ಏನೇನು ಕ್ರಮ ಕೈಗೊಳ್ಳುತ್ತಾರೊ ಅದರಂತೆ ನಡೆದುಕೊಳ್ಳಬೇಕು. ಬೇರೆ ಜಿಲ್ಲೆಯದ್ದು ನಮಗೆ ಬೇಡ. ನಾವೆಲ್ಲ ಸಂತೋಷದಿಂದ ಒಗ್ಗಟ್ಟಾಗಿ ಹಬ್ಬ ಆಚರಿಸೋಣ ಎಂದರು.

ಪಿಎಸ್‌ಐ ಶಿವನಗೌಡ ಜಿ. ಪಾಟೀಲ್, ಪುರಸಭೆ ಮುಖ್ಯಾಧಿಕಾರಿ ಬಸವರಾಜ ಸಿಗ್ಗಾವಿ, ಆರೋಗ್ಯಾಧಿಕಾರಿ ಜ್ಯೋತಿ, ಸದಸ್ಯ ಜಮಾಲುದ್ದೀನ್, ವೀರಾಂಜನೇಯ ಸ್ವಾಮಿ ಟ್ರಸ್ಟ್ ಅಧ್ಯಕ್ಷ ಮೋಹನ್, ಕರವೇಅಧ್ಯಕ್ಷ ಚಂದ್ರಶೇಖರ್, ಅಬ್ದುಲ್‌ಖಾದರ್, ಆದಿಲ್, ಇಫಿ ಸೇರಿದಂತೆ ಇತರರಿದ್ದರು.

# ಇತಿಹಾಸದಲ್ಲಿ ಈ ದಿನ



## ಆಗಸ್ಟ್-22

1864: ಜಿನೀವಾ ಒಪ್ಪಂದಕ್ಕೆ ಸಹಿ ಹಾಕುವ ಮೂಲಕ ಯುದ್ಧದಲ್ಲಿ ಗಾಯಗೊಂಡ ಸೈನಿಕರ ರಕ್ಷಣೆಗೆ ಅಂತರರಾಷ್ಟ್ರೀಯ ಮಾನವೀಯ ಕಾನೂನಿಗೆ ಪ್ರಮುಖ ಅಡಿಪಾಯ ಹಾಕಲಾಯಿತು.

1907: ಭಾರತದ ಸ್ವಾತಂತ್ರ್ಯ ಹೋರಾಟಗಾರ ಹಾಗೂ ಸಮಾಜ ಸುಧಾರಕ ವಿನಾಯಕ ದಾಮೋದರ ಸಾವರ್ಕರ್ ಅವರ ಜೀವನದಲ್ಲಿ ಮಹತ್ವದ ಘಟನೆಗಳು ನಡೆದ ಕಾಲಘಟ್ಟ.

1910: ಕೊರಿಯಾ ಜಪಾನ್ ಸಾಮ್ರಾಜ್ಯದ ಅಧೀನಕ್ಕೆ ಒಳಗಾದ ಅವಧಿಯಲ್ಲಿ ಕೊರಿಯಾದ ಮೇಲಿನ ಜಪಾನಿನ ಆಳ್ವಿಕೆ ಅಧಿಕೃತವಾಗಿ ಆರಂಭವಾಯಿತು.

1962: ಅಮೆರಿಕದ ಬಾಹ್ಯಾಕಾಶ ಸಂಸ್ಥೆ ನಾಸಾದ ಮ್ಯಾರಿನರ್-2 ಯೋಜನೆಗೆ ಸಂಬಂಧಿಸಿದ ಬಾಹ್ಯಾಕಾಶ ಸಂಶೋಧನೆಗಳು ವೇಗ ಪಡೆದುಕೊಂಡವು.

**ಜನನ**

1924: ಕೃಷ್ಣಚಂದ್ರ, ಪಾಂಡೆ, ಭಾರತೀಯ ವಿಜ್ಞಾನಿ

1934: ನಾರಾಯಣ ದತ್ತ ತಿವಾರಿ, ಭಾರತೀಯ ರಾಜಕಾರಣಿ ಹಾಗೂ ಉತ್ತರ ಪ್ರದೇಶದ ಮಾಜಿ ಮುಖ್ಯಮಂತ್ರಿ

# ಅದೊಂದು ಬೇರೆಯದೇ ಅನುಭೂತಿ....11

**ಧನಂಜಯ ಜೀವಾಳ ಬಿ.ಕೆ.**

**ಗ್ರಾಮಾಯಣ-53**

ಪ್ರವಾಸದ ರಸನಿಮಿಷಗಳನ್ನು ಮೆಲುಕು ಹಾಕುತ್ತಾ ಊರಿನೆಡೆಗೆ ಹೊರಟ ತಂಡ ದಾರಿಯುದ್ದಕ್ಕೂ ಚರ್ಚಿಸದ ವಿಚಾರವೇ ಇರಲಿಲ್ಲ. ನಮ್ಮ ಬದುಕು ಹೇಗೆ ರೂಪುಗೊಳ್ಳುತ್ತಾ ಹೋಗುತ್ತದೆ ಎಂಬುದನ್ನು ತನ್ನ ಸಹೋದ್ಯೋಗಿಗಳೊಂದಿಗೆ ಚರ್ಚಿಸುತ್ತಾ, ಗಿರೀಶ್ ಮೇಷ್ಟ್ರು,

ನಮ್ಮ ಬದುಕನ್ನು ರೂಪಿಸಿದವರು, ಬದುಕಿನ ದೃಷ್ಟಿಕೋನವನ್ನು ಕಟ್ಟಿಕೊಟ್ಟವರು, ಬದುಕಿನ ತಿರುವುಗಳನ್ನು ಹೊರಳಿಸಿದವರು, ನಾವು ಆಲೋಚಿಸುವ ರೀತಿಯನ್ನು ಪ್ರಭಾವಿಸಿದವರು ಯಾರ್ಯಾರೆಂದು ಹಿಂದಿರುಗಿ ನೋಡಿದರೆ, ನಮ್ಮನ್ನು ಹುಟ್ಟಿಸಿದವರು, ಹೆತ್ತು ಬೆಳೆಸಿದವರು, ಬಾಲ್ಯದಲ್ಲಿ ಬೆರಳು ಹಿಡಿದು ನಡೆಯಲು ಕಲಿಸಿದವರು, ಅಕ್ಷರ ತಿದ್ದಿಸಿದವರು, ಬಾಲ್ಯದಲ್ಲಿ ಕ್ಲಾಸ್‌ರೂಮಿನ ಬೆಂಚಿನಿಂದ ನೂಕಿ ಬೀಳಿಸಿದವರು, ಏನಾಗಲ್ಲ ಬಾ ಎಂದು ಎರಡಾಳುದ್ದದ ನೀರಿನ ಹೊಂಡಕ್ಕೆ ನೆಗೆಸಿದವರು, ನಾನು ಬರೆದ ಚಿತ್ರವನ್ನೆ ತನ್ನದೆಂದು ತೋರಿಸಿ ಬೆನ್ನು ತಟ್ಟಿಸಿಕೊಂಡವರು, ಬೇಕಿದ್ರೆ ಇದ ತಗೋ; ಇಲ್ದಿದ್ರೆ ಏನೂ ಇಲ್ಲ ಎಂದು ಬಾಗಿಲು ತೋರಿದವರು, ಸೀಬೇಹಣ್ಣು ಕದಿಯಲು ಮರ ಹತ್ತಿಸಿ; ಮಾಲೀಕ ಓಡಿಸಿಕೊಂಡು ಬಂದಾಗ ನನ್ನನ್ನು ಸಿಕ್ಕಿಹಾಕಿಸಿ ಓಡಿ ಹೋದವರು, ಇವತ್ತು ನಿಮ್ಮಪ್ಪನ ಜೇಬಿನಿಂದ ಹತ್ರುಪಾಯಿ ಎಗರಿಸಿಕೊಂಡು ಬಾ



ಎಂದು ಹುರಿದುಂಬಿಸಿದವರು, ಈ ಲವ್ ಲೆಟರನ್ನು ಅವಳಿಗೆ ಕೊಟ್ಟು ಬಾ ಎಂದು ಪೂಸಿ ಮಾಡಿದವರು, ನೀನಾಗಿಯೇ ಮಾಡಿಕೊಂಡಿದ್ದು; ಎಲ್ಲಾ ನಿನ್ನ ಹಣೆಬರಹ ಎಂದವರು, ತಮಗಾಗದ್ದನ್ನು ನಾ ಸಾಧಿಸಿದಾಗ ತಾನೇ ಗೆದ್ದಂತೆ ಸಂಭ್ರಮಿಸಿದವರು, ನನ್ನ ಎದುರಾಗಿ ಸಾಕ್ಷಿ ಹೇಳಿದರೆ ಕಾಲ್ಮುರಿತೀನಿ ಎಂದವರು, ಎಂದೋ ಬಸ್ಸಿನಲ್ಲಿ ನಮ್ಮ ಪಕ್ಕದಲ್ಲಿ ಕುಳಿತು ಪಯಣಿಸಿದವರು, ಪರೀಕ್ಷೆಯ ಹಿಂದಿನ ದಿನದವರೆಗೂ ನೋಟ್ಸ್ ಇವತ್ತು ವಾಪಾಸ್ ಕೊಡ್ತೀನಿ, ನಾಳೆ ಕೊಡ್ತೀನಿ ಅಂತ ಆಟವಾಡಿಸಿದವರು.

ಸಾಧ್ಯವೇ ಇಲ್ಲವೆಂದು ಕೈಚೆಲ್ಲಿ ಹತಾಶನಾದಾಗ ಅಂಡಿನ ಮೇಲೆ ಬಾರಿಸಿ ಉತ್ಸಾಹ ತುಂಬಿದವರು, ಕಡ್ಡಿಯಲ್ಲೂ ಮುಟ್ಟಬಾರದ್ದನ್ನು ಕಾಲಿನಿಂದ ಮೆಟ್ಟಿಸಿ ಚಪ್ಪಾಳೆ ತಟ್ಟಿದವರು, ಒಳ್ಳೆಯ ಹಣ್ಣು ತೋರಿಸಿ; ಕೊಳೆತಿದ್ದನ್ನು ಪ್ಯಾಕ್ ಮಾಡಿಕೊಟ್ಟವರು, ನನಗೆ ಕಾಣಿಸುವಂತೆ ಇಟ್ಟುಕೊಂಡು ಬರೆಯದಿದ್ದರೆ; ಹೊರಗೆ ಬಂದಾಗ ನೋಡ್ಕೋತೀನಿ ಎಂದವರು, ನನ್ ಹತ್ರವೂ ಲೆಟರ್ ಇಸ್ಕೊಂಡು, ಇನ್ನೂ ಇಬ್ಬರೊಡನೆಯೂ ಕಣ್ಣಿನಲ್ಲಿಯೇ ಕಾವ್ಯ ಬರೆಯುತ್ತಿದ್ದವಳು, ನೀನು ನನಗೆ ಮ್ಯಾಚಾ? ಹಥಾ ಎಂದವಳು, ನಿನಗೆ ನನಗಿಂತಲೂ ಒಳ್ಳೇ ಹುಡುಗಿ ಸಿಕ್ತಾಳೆ ಎಂದು ಸಮಾಧಾನ ಹೇಳಿದವಳು, ಹುಟ್ಟಿ ಬೆಳೆದ ಮನೆ ಬಿಟ್ಟು ಬಾಳಿನುದ್ದಕ್ಕೂ ಜೊತೆಯಲ್ಲಿರುವೆ ಎಂದು ಕೈಹಿಡಿದವಳು, ನಾವೇ ಜನ್ಮ ನೀಡಿದ ಮಕ್ಕಳು, ಜೊತೆಯಲ್ಲಿದ್ದೇ ನಯವಾಗಿ ಬತ್ತಿ ಇಟ್ಟವರು, ಅನಿರಿಕ್ಷಿತವಾಗಿ ಸಹಾಯ ಮಾಡಿದವರು, ನಮ್ಮನ್ನು ಟಿಶ್ಯೂ ಪೇಪರಿನಂತೆ ಬಳಸಿ ಎಸೆದವರು, ದಿಕ್ಕೆಟ್ಟು ಕೂತಾಗ ಹೊಸ ಸಾಧ್ಯತೆ ತೋರಿದವರು, ಹಣ ಪಡೆದೂ ಕೆಲಸ ಮಾಡದೆ ಕೈ ಎತ್ತಿದವರು, ವಿಷಮ ಪರಿಸ್ಥಿತಿಯಲ್ಲಿ ಜೊತೆ ನಿಂತು ಸಂಬಾಳಿಸಿದವರು, ಸಾರ್ವಜನಿಕವಾಗಿ ಅಪಮಾನಿಸಿದವರು, ಕಿವಿ ಹಿಡಿದು ಬುದ್ಧಿ ಹೇಳಿದವರು, ಬೆಂಗಳೂರಿನಲ್ಲಿ ಕೆಲಸವೊಂದನ್ನು ಹಿಡಿದು; ಬಂದು ನಿನ್ನನ್ನು ಕರೆದೊಯ್ಯುತ್ತೇನೆಂದು ಹೇಳಿ ಶಾಶ್ವತವಾಗಿ ನಿರ್ಗಮಿಸಿದವರು, ಎದುರಾ ಎದುರು ಮುಖಭಂಗ ಮಾಡಿದವರು, ಭುಜ ಅಮುಕಿ ಧೈರ್ಯ ತುಂಬಿದವರು, ಹೆಜ್ಜೆಹೆಜ್ಜೆಗೂ ಅಡ್ಡಗಾಲು ಹಾಕಿದವರು, ನಮ್ಮಲ್ಲೂ ಇರಬಹುದಾದ ಸಣ್ಣತನವನ್ನು ತೆರೆದು ತೋರಿಸಿ ಕನ್ನಡಿಯಾದವರು, ಆತ್ಮವಿಶ್ವಾಸವೇ ಕೊಚ್ಚಿ ಹೋಗುವಂತೆ ತಿರಸ್ಕಾರದಿಂದ ನೋಡಿದವರು, ಏನೂ ಆಗಲ್ಲ; ನಾನಿದ್ದೇನೆ ಎಂದು ಹೆಗಲು ಕೊಟ್ಟು ನಿಂತವರು ಹೀಗೆ ಪಟ್ಟಿ ನಿರಂತರವಾಗಿ ಬೆಳೆಯುತ್ತಲೇ ಹೋಗುತ್ತದೆ.

ಪ್ರತಿಯೋರ್ವರ ಬದುಕಿನಲ್ಲಿ ಇಂತಹ ಹತ್ತಾರು ಸಂದರ್ಭಗಳು ಮಿಂಚಿ, ಶಾಶ್ವತವಾದ ತಿರುವುಗಳನ್ನು ಸೃಷ್ಟಿಸಿ ಎಂದೆಂದಿಗೂ ಹಿಂದಿರುಗಲಾರದ ಜೀವಪ್ರವಾಹದಲ್ಲಿ ಲೀನವಾಗಿರುತ್ತದೆ. ಈ ಮೇಲಿನ ಸಾಲುಗಳನ್ನು ಕೇಳುತ್ತಿರುವಾಗ ನಿಮ್ಮ ಸ್ಮೃತಿಪಟಲದಲ್ಲಿ ಮಿಂಚಿ ಮಾಯವಾದವರೆಷ್ಟೋ? ಬುದ್ಧ, ಬಸವ, ವಿವೇಕಾನಂದ, ಗಾಂಧೀ ಇನ್ಯಾರೋ ಸಾಹಿತಿ ನಮ್ಮ ಬದುಕನ್ನು ಪ್ರಭಾವಿಸಿದರು, ರೂಪಿಸಿದರು, ಪ್ರೇರಣೆ ನೀಡಿದರು ಎಂಬುದೆಲ್ಲ ವಾಸ್ತವವಾಗಿ ಸಿನಿಕತನವಲ್ಲದೇ, ಬೇರೇನಲ್ಲ. (ಮುಂದುವರಿಯುವುದು)

Printed, Published and Owned by Manjunatha B.R. and Printed at PAPPAS PRINT HOUSE, BEHIND DISTRICT STADIUM, M.G.ROAD,VIDYANAGAR, HASSAN, KARNATAKA-573201 and published at No. 150, BANAVASE, SAKALESHPURA TALLUK, HASSAN DISTRICT, KARNATAKA-573201. Editor: MANJU BANAVASE. Ph: 8762954248